ಸಂಬಂಧಪಟ್ಟಂತೆ ಅವರು 24 ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿರಲಿಲ್ಲ. ಮತ್ತೆ ಇದರ ಬಗ್ಗೆ ಅವರ ವೆಬ್‌ಸೈಟ್‌ನಲ್ಲಿ ಮಾಹಿತಿಗಳು ಕೂಡ ಇರಲಿಲ್ಲ. ಅದೇ ರೀತಿಯಾಗಿ 13 ಕಾಲೇಜುಗಳಿಗೆ ಪಾರ್ಷಿಯಲ್ ಆಗಿ ಅನುಮತಿಯನ್ನು ಕೊಟ್ಟಿರುವ ಮಾಹಿತಿ ವೆಬ್‌ಸೈಟ್‌ನಲ್ಲಿತ್ತು. ಅವರು ಈ ರೀತಿಯಾದ ಒಂದು ಗೊಂದಲ ಮಾಡಿದ್ದರು. ನಾನು ಹಿಂದೆ Education Ministers Conference ನಲ್ಲಿ ಮಾನ್ಯ ಹೆಚ್.ಆರ್.ಡಿ. ಸಚಿವರನ್ನು ಭೇಟಿ ಮಾಡಿದ್ದೆ. ಮತ್ತೆ ಮೊನ್ನೆ ದಿವಸ ವಿಶೇಷವಾಗಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಅವರನ್ನು ಭೇಟಿ ಮಾಡಿ ಬಂದಿದ್ದೆ. 28 ನೇ ತಾರೀಖಿನೊಳಗೆ ಕ್ಲಿಯರ್ ಮಾಡುತ್ತೇವೆಂದು ಆ ಸಂದರ್ಭದಲ್ಲಿ ಹೇಳಿದ್ದರು. ಅನಿವಾರ್ಯಕಾರಣಗಳಿಂದ ಅವರಿಗೆ ಮಾಡುವುದಕ್ಕೆ ಆಗಿರಲಿಲ್ಲ. ಅನಿವಾರ್ಯ ಎಂದು ಹೇಳುವುದಕ್ಕಿಂಥ ಅಲ್ಲಿರುವಂಥ ಗೊಂದಲದ ಕಾರಣದಿಂದ ಮಾಡಿರುವುದಕ್ಕೆ ಆಗಿರಲಿಲ್ಲ. ನಿನ್ನೆ ದಿವಸ ನಾನು AICTE Chairman ಜೊತೆಯಲ್ಲಿ ಮಾತನಾಡಿದೆ. ನಮ್ಮ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ದೆಹಲಿಗೆ ಕಳುಹಿಸಿದ್ದೆ, ಅದರ ಪ್ರತಿಫಲವಾಗಿ AICTE ಯವರು ಈಗ 2009–10 ನೇ ಸಾಲಿಗೆ ಏನು intake ಇತ್ತು ಆ ಕಾಲೇಜುಗಳಿಗೆ ಆ intake ಮೇಲೆಯೇ ತಾವು ಮುಂದುವರೆಯಬಹುದು ಎನ್ನವಂಥ ಅನುಮತಿಯನ್ನು ಇಡೀ ದೇಶಕ್ಕೆ ಕೊಟ್ಟಿದ್ದಾರೆ. ನಮ್ಮ ಕರ್ನಾಟಕದ ಪ್ರಯತ್ನದ ಫಲವಾಗಿ AICTE ಯವರು ಮಾಡಿರುವ ಗೊಂದಲ ಮತ್ತು ಅವರ ಅನಾನುಭವದಿಂದ ನಮಗೆ ತೊಂದರೆಯಾಗಿತ್ತು, ಆ ಸಮಸ್ಯೆ ಈಗ ನಿವಾರಣೆಯಾಗಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

5. ನಿಯಮ–69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಅಲ್ಪ ಕಾಲಾವಧಿ ಚರ್ಚೆ :

ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ

ಶ್ರೀ ಟಿ. ಬಿ. ಜಯಚಂದ್ರ (ಶಿರಾ) :– ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತರ ರಾಜೀನಾಮೆಯ ಹಿನ್ನೆಲೆಯಲ್ಲಿ ನಿಯಮ 69 ರ ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿ ನಾನು ಅರ್ಧಕ್ಕೆ ನಿಲ್ಲಿಸಿದ್ದೆ. ನಾನು ಇನ್ನೇನು ಮಾಡಬೇಕೆನ್ನುವ ಹಂತದಲ್ಲಿರುವಾಗ ಹೊಸ ಹೊಸ ವಿಚಾರಗಳು ಕೂಡ ಇವತ್ತು ಬೆಳಕಿಗೆ ಬರುತ್ತಿವೆ. ಮಾನ್ಯ ರಾಜ್ಯಪಾಲರು ಸಂದೇಶವನ್ನು ಕಳುಹಿಸಿದ್ದಾರೆ. ರಾಜ್ಯಪಾಲರು ಕಳುಹಿಸಿರತಕ್ಕಂಥ ಸಂದೇಶ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ಬಂದಿದೆ ಎನ್ನವಂಥ ವಿಷಯವನ್ನು ತಾವು ಹೇಳಿದಿರಿ. ಆ ಸಂದೇಶ ಏನು ನಮ್ಮ ನಿಯಮಾವಳಿಗಳ ಪ್ರಕಾರ, ರಾಜ್ಯಪಾಲರಿಂದ

ಸಂದೇಶ ಬಂದಾಗ ಆ ಸಂದೇಶವನ್ನು ಸದನದ ಮುಂದೆ ಓದತಕ್ಕದ್ದು, ಹಾಗೂ ಸಂದೇಶದಲ್ಲಿ ಹೇಳಿರುವಂಥ ವಿಷಯಗಳನ್ನು ಪರಿಶೀಲಿಸಲು ಅನುಸರಿಸಬೇಕಾದ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಅವಶ್ಯ ನಿರ್ದೇಶನಗಳನ್ನು ನೀಡತಕ್ಕದ್ದು.

ಅಧ್ಯಕ್ಷರು : ಅದನ್ನು ಪರಿಶೀಲನೆ ಮಾಡಿ ಓದಬೇಕೆಂದು ಹೇಳಿದಾಗ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸದನದಲ್ಲಿ ಒಮ್ಮತದ ನಿರ್ಣಯ ತೆಗೆದುಕೊಳ್ಳಬೇಕೆಂದು ಏನು ಪತ್ರವನ್ನು ಬರೆದಿದ್ದರು ಅಷ್ಟೊತ್ತಿಗಾಗಲೇ ರಾಜೀನಾಮೆ ವಾಪಸ್ಸು ತೆಗೆದುಕೊಂಡು ಅವರು ಪ್ರಕಟಣೆ ಮಾಡಿ ಆಗಿತ್ತು, ಈ ಪತ್ರ ತಲುಪುವುದರೊಳಗಾಗಿ, ಆದ್ದರಿಂದ ರಾಜ್ಯಪಾಲರ ಕಚೇರಿಯಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ಈಗ ರಾಜ್ಯಪಾಲರು ಊರಲ್ಲಿ ಇಲ್ಲ ಎನ್ನುವಂಥ ಮಾಹಿತಿಯನ್ನು ಕೊಟ್ಟರು. ಅದಕ್ಕೋಸ್ಕರ ಇಲ್ಲಿ ಓದಲಿಲ್ಲ. ಇವತ್ತು ಇಲ್ಲದಿದ್ದರೆ ಅದನ್ನು ನಾಳೆ ಸದನದಲ್ಲಿ ಓದುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಸದನದಲ್ಲಿ ಮಂಡನೆಯಾಗಲಿ.

ಅಧ್ಯಕ್ಷರು : ಮಧ್ಯಾಹ್ನ ಮಂಡನೆ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಲೋಕಾಯುಕ್ತರು ರಾಜೀನಾಮೆಯನ್ನು ನೇರವಾಗಿ ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಅದಕ್ಕಾಗಿ ಒಂದು ಡೇಟನ್ನು ಹಾಕಿ.

ಅಧ್ಯಕ್ಷರು : ರಾಜ್ಯಪಾಲರ ಕಚೇರಿಯಿಂದ ಮಾಹಿತಿ ಬಂದಿರುವುದರಿಂದ ಮಂಡನೆ ಮಾಡಲಿಲ್ಲ. ಮಧ್ಯಾಹ್ನ ಮಂಡನೆ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಧ್ಯಾಹ್ನ ಮಂಡನೆ ಮಾಡಿ, ಏಕೆಂದರೆ ನಮಗೆ ಚರ್ಚೆಗೆ ಪೂರಕವಾಗುತ್ತದೆನ್ನುವ ಕಾರಣಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಮೊನ್ನೆ ಮಾತನಾಡಬೇಕಾದಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಈ ದೇಶದಲ್ಲಿಯೇ ಮೊದಲು ನಾನು value addition ಮಾಡಬೇಕು. ಖನಿಜ ಸಂಪತ್ತು ಇವತ್ತು ಸಾರಾಸಗಟಾಗಿ ಬೇರೆ ದೇಶಕ್ಕೆ ಹೋಗುತ್ತದೆನ್ನುವ ಕಾರಣಕ್ಕಾಗಿ ಅದನ್ನು ತಪ್ಪಿಸುವುದಕ್ಕೋಸ್ಕರ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪಾಲಿಸಿ ಮಾಡಿರುವ ಏಕೈಕ ಮುಖ್ಯಮಂತ್ರಿ ಎಂದು ಹೇಳಿದರು. ನಮ್ಮ ಮುಖ್ಯಮಂತ್ರಿಗಳದ್ದು ಎಂತಹ progressive thinking ಎಂದು ನಿಜವಾಗಲೂ ಕೂಡ ನನಗೆ ಬಹಳ ಸಂತೋಷವಾಯಿತು. ಆಮೇಲೆ ಅವರ ಪಾಲಿಸಿ ಏನಿದೆ ಎಂದು ನಾನು ಓದಿದೆ. National Minerzl Policy-2008 ರಲ್ಲಿ ಕೇಂದ್ರ ಸರ್ಕಾರ ಒಂದು ನೀತಿಯನ್ನು ತಂದಿದೆ. ಆ ನೀತಿಯ ಉಲ್ಲೇಖ ಏನು ಎನ್ನುವುದನ್ನು ಕೆಲವೊಂದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. "Value addition will, therefore, be actively encouraged.

However, such value addition will go hand in hand with the growth of the mineral sector as a stand alone industrial activity. While, appropriate linkages between exploitation of minerals and their end use including the development of industry based on the minerals will be established wherever feasible, a downward curve in an industrial sector using a particular mineral within the country need not be allowed to effect the growth of mining activity for that mineral. Hence empoloyment and tertiary sector spin offs from both value addition as well as from mining will be encouraged so as to maximize the contribution of the mineral sector to the country's gross domestic product". ಇನ್ನೊಂದು ಬಹಳ ಮುಖ್ಯವಾದುದೇನೆಂದರೆ: "The Central Government in consultation with State Governments shall formulate the legal measures necessary for giving effet to the new national Mineral Policy, 2008 to ensure basic uniformity in mineral administration across the country and to ensure basic uniformity in mineral administration across the country and to ensure that the development of mineral resources keeps pace, and is in consonance with the national policy goals. the MMDR Act, the MCR and the MCDR will be amended in line with the policy. The regulation of mines and development of mineral resources in accordance with the national goals and priorities as spelt out in the policy and the legal framework shall be the responsibility of both the Central and the State Governments." "In future the core functions of the State in mining will be facilitation and regulation of exploration and mining activities of investors and entrepreneurs, provision of infrastructure and tax collection. In

mining activities, there shall be arms length distance between State agencies (Public Sector Undertakings) that mine and those that regulate. There shall be transparency and fair play in the reservation of ore bodies to State agencies on such ares where private players are not holding or have not applied for exploration or mining, unless security considerations or specific public interests are involved." ಈ ಪಾಲಿಸಿಯ ಅನ್ವಯ ನಮ್ಮ public undertakings ಏನಾಗಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇಷ್ಟೊಂದು ಈ ಅದಿರಿಗೆ ಬಂದಿರತಕ್ಕಂಥ ಬೆಲೆಯಲ್ಲಿ ಏಕೆ ಅವರು ಮುಂದೆ ಬರುತ್ತಿಲ್ಲ. ಅವರಿಗೆ ಏಕೆ ಪ್ರೋತ್ಸಾಹ ಕೊಡುತ್ತಿಲ್ಲ. ಅವು ಸರ್ಕಾರದ ಅಧೀನದಲ್ಲಿಯೆ ಬರತಕ್ಕಂಥ ಸಂಸ್ಥೆಗಳು. ಎಲ್ಲೋ ಒಂದು ಕಡೆಗೆ ಯೋಚನೆ ಮಾಡಬಹುದಾಗಿತ್ತು. MML ಇದು ಯಾವರೀತಿಯಾಗಿ ಅಸ್ತಿತ್ವಕ್ಕೆ ಬಂದಿರುವುದು. Mysore Minerals Limited ಸನ್ಮಾನ್ಯ ದೇವರಾಜ್ ಅರಸುರವರು ಇರುವಂಥ ಕಾಲದಲ್ಲಿ ಗ್ರಾನೈಟ್ ಒಂದು ಕಡೆ ಕೂಡಿಟ್ಟಿರುವಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿರತಕ್ಕಂಥ ಅದಿರು ಸಂಪತ್ತು ಇವತ್ತು ಖಾಸಗಿಯವರ ಕೈಯಲ್ಲಿ ಹೋಗಬೇಕಾದಾಗ ಅದಕ್ಕೆ ಎಲ್ಲೋ ಒಂದು ಕಡೆ ನಿಯಂತ್ರಣ ಇರಬೇಕು. ಸರ್ಕಾರದ ಸ್ವಾಮ್ಯದಲ್ಲಿ ನಡೆಯಬೇಕೆನ್ನುವ ಕಾರಣಕ್ಕೋಸ್ಕರ ಈ ಒಂದು MML ಮಾಡಿದ್ದು. ಆದರೆ MML ಇವತ್ತು picture ನಲ್ಲಿಯೆ ಇಲ್ಲ. Public Undertakings ಇವತ್ತು ಮುಂದೆ ಬರುತ್ತಿಲ್ಲ. ಅದಕ್ಕೆ ಆದ್ಯತೆಯನ್ನು ಕೊಡುತ್ತಿಲ್ಲವೆಂದರೆ ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. "This is particularly important in iron ore mining as ablout 80% of the iron ore produced in the country is in the form of fines and to promote such value addition fiscal and non-fiscal incentives will be considered. A thrust will be given to exploitation of mineral resources in which the country is well endowed so that the needs of domestic industry are fully met keeping in mind both present and future needs, while at the same time exploiting the external markets for such minerals."

(ಈ ಹಂತದಲ್ಲಿ ಛೇರ್ಮನ್‌ರಾದ ಶ್ರೀ ಚಂದ್ರಕಾಂತ ಬೆಲ್ಲದರವರು ಪೀಠವನ್ನು ಅಲಂಕರಿಸಿದರು) ಎಲ್ಲೆಲ್ಲಿ small deposits ಇದೆಯೋ ಅದರ ಕಡೆಗೂ ಗಮನ

ಕೊಡಬೇಕು. ಇದು scientific mining ಆಗಬೇಕು. ಅಲ್ಲಿ ಕೂಡ ಸಣ್ಣ ಸಣ್ಣ ಕೈಗಾರಿಕೆಗಳಿಗೆ Scope ಕೊಡಬೇಕು. ಸಣ್ಣ ಸಣ್ಣ ಕೈಗಾರಿಕೆಗಳು ಮೂಲಾಧಾರವಾಗಬೇಕು ಎನ್ನತಕ್ಕಂಥದ್ದರ ಬಗ್ಗೆ ಅವರ ಪಾಲಿಸಿಯಲ್ಲಿ ಹೇಳಿದ್ದಾರೆ. "No mining lease would be granted any party, private or public, without a proper mining plan including the environmental management plan and all these things." ಅದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. Foreign Trade ಎನ್ನತಕ್ಕಂಥದ್ದು ಇದೆ. Minerals continue to be an important source of foreign exchange earnings. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ನಾವೆಲ್ಲರೂ ಸೇರಿ ದೆಹಲಿಗೆ ನಿಯೋಗ ಹೋಗೋಣ. ಇದನ್ನು ರಾಷ್ಟ್ರೀಕರಣ ಮಾಡಿ ಎಂದು ಹೇಳೋಣ ಎಂದರು. ಯಾವ ಮುಖ್ಯಮಂತ್ರಿಗಳು ಪತ್ರ ಬರೆದಿರಲಿಲ್ಲ ನಾನು ಬರೆದಿದ್ದೇನೆಂದು ಹೇಳಿದರು. ರಾಜ್ಯದಲ್ಲಿ ದೊಡ್ಡ ಇನಿಸಿಯೇಟಿವ್ ತೆಗೆದುಕೊಂಡಿದ್ದೇನೆ ಎನ್ನುವಂಥ ಮಾತನ್ನು ಹೇಳುವಾಗ ಅವರ ಪಾಲಿಸಿ ಏನಿದೆ ಎಂದು, ಆ ಪಾಲಿಸಿಯನ್ನು ಅರ್ಥಮಾಡಿಕೊಳ್ಳಬೇಕು.

Minerals continue to be an important source of foreign exchange earnings. The policy of export shall keep in view the dynamics of mineral inventories as well as the short, medium and long term needs of the country. Efforts shall be made to export minerals in value added form as far as possible. At the intention of the Government it is bounden duty of the State Government to follow it up also. The indigenious mineral industry shall be attuned to the international economic stiuation in order to derive maxium asvantage from foreign trade by carefully anticipating technology and demand changes in the international market for minerals. ಇದು ಕೇಂದ್ರ ಸರ್ಕಾರದ ಸ್ಪಷ್ಟವಾಗಿರುವಂತಹ ನೀತಿಯ ಹಿನ್ನೆಲೆಯಲ್ಲಿ ಇವತ್ತು ನೀವು ಖನಿಜ ನೀತಿಯನ್ನು ತಂದಿದ್ದೀರಿ. ಈ ಪುಸ್ತಕದಲ್ಲಿ ಪ್ರಿಂಟ್ ಮಾಡಿರುವುದು ಇವತ್ತು ಕೇಂದ್ರ ಸರ್ಕಾರದ ರಾಷ್ಟ್ರೀಯ ಖನಿಜ ನೀತಿ ಏನು 2008 ಎನ್ನುವುದನ್ನು ಆಮೇಲೆ ನಿಮ್ಮ ನೀತಿಯನ್ನು ಕೂಡ ತಾವು ಹೇಳಿಕೊಂಡು

ಹೋಗಿದ್ದೀರಿ. ನಿಮ್ಮ ನೀತಿಯಲ್ಲಿಯೂ ಕೂಡ ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ನೀವು ಒಂದು ನೀತಿಯನ್ನು ಮಾಡಿದ್ದೀರಿ. ಆ ನೀತಿಯ ಪ್ರಕಾರ ತಾವು ನಡೆಯುತ್ತೀರಾ ಅಥವಾ ಇಲ್ಲವಾ ಎಂದು ನಾನು ಹೇಳುತ್ತಿರುವುದು. ಅದು ಮುಖ್ಯ ನೀತಿಯನ್ನು ಯಾರು ಬೇಕಾದರೂ ಹೇಳಬಹುದು. ಇವತ್ತು ಸಾಹಿತ್ಯಮಯವಾಗಿ ಬಿಂಬಿಸಿ ಹೇಳಬೇಕಾದರೆ ಬಹಳ ಸುಲಭ, ಬೋಧನೆ ಮಾಡುವುದು ಬಹಳ ಸುಲಭ, ಆದರೆ ಪಾಲನೆ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಕಬ್ಬಿಣದ ಅದಿರುಗಳ ಮೈನ್ಸ್ ದೇಶೀಯ ಬಳಕೆ ಕಡಿಮೆ ದರ್ಜೆಯ ಅದಿರಿನ ಸಂಸ್ಕರಣೆಗೆ ಉತ್ತೇಜನ ನೀಡುವ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ನೀಡುವುದು ಇದು ನಿಮ್ಮ ರಾಜ್ಯದ ನೀತಿ. ಗಣಿಗಾರಿಕೆಯ ಯೋಜನೆಯ ಪ್ರಕಾರ ಗಣಿಗಾರಿಕೆ ನಡೆಯುತ್ತಿರುವುದು ದೃಢಪಡಿಸಿಕೊಳ್ಳಲು ಉತ್ಪಾದನೆ ಇಲ್ಲದೆ ಹೆಚ್ಚು ಖನಿಜ ಸಂಪತ್ತನ್ನು ಹೊಂದುವುದನ್ನು ಪ್ರೋತ್ಸಾಹಿಸದಿರಲು ರಾಷ್ಟ್ರೀಯ ಖಾಸಗಿ ಸಂಸ್ಥೆಗೆ ನೀಡಿರುವಂತಹ ಗಣಿಗಳನ್ನು ಪರಿಶೀಲಿಸುವುದು. ಈ ಬಗ್ಗೆ ಎಷ್ಟು ಪರಿಶೀಲಿಸಿದ್ದೀರಿ ಸ್ವಾಮಿ? ಈ ಬಗ್ಗೆ ಮುಂದೆ ಹೇಳುತ್ತೇನೆ. ಗಣಿಗಾರಿಕೆಯಿಂದ ಸಂಗ್ರಹಿಸಲಾದ ರಾಜಧನವನ್ನು ಗಣಿಗಾರಿಕೆ ಪ್ರದೇಶದ ಜಿಲ್ಲೆಗಳ ಅಭಿವೃದ್ಧಿಗೆ ಒದಗಿಸುವುದು. ಇವುಗಳ ಬಗ್ಗೆ ನಿಮ್ಮ ನೀತಿಯಲ್ಲಿ ಬಹಳಷ್ಟು ಹೇಳಿದ್ದೀರಿ. ಗಣಿಗಾರಿಕೆಯಿಂದ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವುದರಿಂದ ಗಣಿಗಾರಿಕೆಯನ್ನು ಒಂದು ಉದ್ಯಮವಾಗಿ ಉದ್ದೇಶಿಸುವುದು ಅವಶ್ಯಕತೆ ಇದೆ. ಅದರ ಸಂಪನ್ಮೂಲ ರಸವತ್ತಾಗಿ ಪರಿವರ್ತಿಸಿ ಮೌಲ್ಯವನ್ನು ನಿರ್ಧರಿಸುತ್ತದೆ. ಲಭ್ಯವಿರುವ ಕಚ್ಚಾವಸ್ತುಗಳ ಸಂಪನ್ಮೂಲಕ್ಕಾಗಿ ಸಮವಾಗಿ ಹೊಸ ಖನಿಜ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸುವುದು ಎನ್ನುವುದು ನಿಮ್ಮ ನೀತಿ. ಆ ನೀತಿಯ ಅನ್ವಯ ನೀವು ಏನಾದರೂ ನಡೆಯುತ್ತಿದ್ದೀರಾ ಎನ್ನುವುದು ಬಹಳ ಮುಖ್ಯವಾಗಿರುವಂತಹ ವಿಚಾರ. ಈಗ ನಾನು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಂತರ ಮಾನ್ಯ ಮುಖ್ಯಮಂತ್ರಿಗಳಿಂದ ಕೊನೆಯದಾಗಿ ಉತ್ತರವನ್ನು ಬಯಸುತ್ತೇನೆ. ಒಂದು ಸಂತೋಷದ ಸಂಗತಿ ಎಂದರೆ, ಇವತ್ತು ಗಣಿಸಮೀಕ್ಷೆಗೋಸ್ಕರ ಬಹಳ ದಿವಸದಿಂದ ಇದ್ದಂತಹ ಗೊಂದಲ ಅದು ಬಗೆಹರಿದಂತೆ ಕಾಣುತ್ತದೆ. 1896 ರಲ್ಲಿ ಇದ್ದಂತಹ ನಕ್ಷೆಗಳು ಏನಿದೆ, ಆ ನಕ್ಷೆಗಳನ್ನು ಆದರಿಸಿಯೇ ಇವತ್ತು ಅಳತೆ ಆಗಬೇಕೆಂಬುದಕ್ಕೆ ಉಭಯ ರಾಜ್ಯಗಳಾದ ಆಂಧ್ರ ಮತ್ತು ಕರ್ನಾಟಕ ರಾಜ್ಯದ ಮುಖ್ಯಕಾರ್ಯದರ್ಶಿಗಳು ಸೇರಿ ಒಮ್ಮತಕ್ಕೆ ಬಂದಿರುವಂತಹದ್ದು ಒಂದು ಸಂತೋಷದ ಸಂಗತಿಯಾಗಿದೆ. ಆದರೆ ಆ ಪ್ರಕಾರ ಆದಾಗ ಹೆಚ್ಚಿನ ರೀತಿಯಲ್ಲಿ ಗಡಿಯನ್ನು ಅಳತೆ ಮಾಡುವಂತಹ ಸಂದರ್ಭದಲ್ಲಿ ಅದು ರಾಜ್ಯಕ್ಕೆ ಹೆಚ್ಚು ಲಾಭವಾಗುತ್ತದೆ

ಎನ್ನುವಂತಹ ವಿಶ್ಲೇಷಣೆ ಮಾಧ್ಯಮದಲ್ಲಿ ಬಂದಿದೆ. ಅದೊಂದು ಬೇರೆ ವಿಚಾರ, ಅದು ಆಗುವುದಕ್ಕೆ ಇನ್ನು 3 ತಿಂಗಳು ಬೇಕು ಎಂದು ಹೇಳುತ್ತಾರೆ. Disputed Area ದಲ್ಲಿ ಮೈನಿಂಗ್ ನಡೆಯುತ್ತಿರುವುದು ಈ ನಿಲುವಿಗೆ ಬಂದ ಮೇಲಾದರೂ ಕೂಡ atleast ಅಲ್ಲಿ ಸಾಗಾಣಿಕೆಯಾಗುತ್ತಿರುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೇ? ಅಲ್ಲಿ ಸಾಗಾಣಿಕೆಯಾಗುತ್ತಿರುವುದನ್ನು ನಿಲ್ಲಿಸಿ, 3 ತಿಂಗಳ ನಂತರ ಅಳತೆ ಮಾಡಿದ ಮೇಲೆ ನಿಮ್ಮನಿಮ್ಮದು ಏನು ಇದೆ, ಅದನ್ನು ನೀವು ತೆಗೆದುಕೊಂಡು ಹೋಗಿ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ. ಈ ಬಗ್ಗೆ ಸರ್ಕಾರ ಏತಕ್ಕಾಗಿ ಮಧ್ಯಪ್ರವೇಶ ಮಾಡುತ್ತಿಲ್ಲ. ಅದರ ಬಗ್ಗೆ ಏನೂ ಗೊತ್ತಿಲ್ಲದ ರೀತಿಯಲ್ಲಿ ಇದೆ ಎನ್ನುವುದನ್ನು ಸ್ವಲ್ಪ ಯೋಚನೆಯನ್ನು ಮಾಡಬೇಕಾಗಿದೆ. ಇನ್ನೊಂದು ಬಹಳ ಮುಖ್ಯವಾಗಿ ನಾನು ಮತ್ತೆ ಮತ್ತೆ ಅದನ್ನು ಹೇಳತಕ್ಕಂತಹ ಪ್ರಶ್ನೆ ಅಲ್ಲ. ಲೋಕಾಯುಕ್ತರು ಸ್ವತಃ ತುಮಕೂರು, ಚಿತ್ರದುರ್ಗ, ಬಳ್ಳಾರಿಯಲ್ಲಿ ಪ್ರತಿಯೊಂದು ಮೈನ್ಸ್ ವಿಸಿಟ್ ಮಾಡಿ ಅಲ್ಲಿ spot inspection ಮಾಡಿ ಅದಕ್ಕೆ ತಾಂತ್ರಿಕವಾಗಿ ಬೇಕಾಗಿರುವಂತಹ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಸಮೀಕ್ಷೆ ಮಾಡಿ ಕೊಟ್ಟಿರುವಂತಹ ವರದಿ ಅದು ಅತ್ಯಂತ ಮುಖ್ಯವಾಗಿರುವಂತಹದ್ದು ಆಗಿದೆ. ಅದು ಸಮಗ್ರವಾಗಿ ಮಾಹಿತಿ ಹೊಂದಿರುವಂತಹ ವರದಿಯಾಗಿದೆ. ಬಹುಶಃ ನೀವು ಅದನ್ನು implement ಮಾಡುವ ಬಗ್ಗೆ ಏನಾದರೂ ಮುಂದಾಗಿದ್ದರೆ ಖಂಡಿತವಾಗಿಯೂ ಯಡಿಯೂರಪ್ಪನವರಿಗೆ ಒಳ್ಳೆಯ ಹೆಸರು ಬರುತ್ತದೆ. ಅಲ್ಲಿ ಏನು ಆಗಲಿಲ್ಲಿ, ಮಾತೆತ್ತಿದರೆ ಕೋರ್ಟು ಎಂದು ಹೇಳುತ್ತಾರೆ, ಇವರು ಕೋರ್ಟಿನ ಕಡೆ ತೋರಿಸುತ್ತಾರೆ, ಜನರು ಯಾವುದಕ್ಕಾಗಿ ಕೋರ್ಟಿಗೆ ಹೋಗುವುದಿಲ್ಲ. ಜನರು ಎಲ್ಲಾ ವಿಷಯಕ್ಕೂ ಕೋರ್ಟಿಗೆ ಹೋಗುತ್ತಾರೆ. ಗಣಿ ವಿಚಾರದ ಬಗ್ಗೆ ಕೋರ್ಟಿಗೆ ಹೋಗಬೇಕಾದರೆ ಅವರಿಗೆ ಅಧಿಕಾರಿಗಳು ಮೊದಲೇ ಹೇಳಿಕೊಟ್ಟಿರುತ್ತಾರೆ. ನಾವು ಒಂದು ನೋಟಿಸ್‌ನ್ನು ಕೊಡುತ್ತೇವೆ. ನೀವು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನೋಟೀಸ್ ಹೇಗೆ ಇರುತ್ತದೆ ಎಂದರೆ ಕೋರ್ಟಿನವರು ಅದಕ್ಕೆ ಸ್ಟೇಯನ್ನು ಕೊಡಬೇಕು ಆ ರೀತಿ ಇರುತ್ತದೆ. ಅವರು ಇಂತಹ ಬೆಂಚ್ ಮುಂದೆ ಹೋಗಿ ಎಂದು ಹೇಳುತ್ತಾರೆ. ನಮ್ಮ ವ್ಯವಸ್ಥೆ ಎಲ್ಲಿಗೆ ಹೋಗಿದೆ ಎಂದರೆ, ಇಂತಹ ಬೆಂಚ್ ಮುಂದೆ ಹೋಗು ನಿಮಗೆ ಸ್ಟೇ ಸಿಗುತ್ತದೆ ಎಂದು ಹೇಳಿ ಇಂತಹ ಅಡ್ವೋಕೇಟ್‌ನ್ನು ಇಡಬೇಕು ಎಂದು ಹೇಳಿಕೊಡುತ್ತಾರೆ. ಆರೀತಿ ಈಗ ತೀರ್ಮಾನವಾಗಿಬಿಟ್ಟಿದೆ. ಈ ರೀತಿಯಾದ ವ್ಯವಸ್ಥೆಯಾದರೆ, ನಮ್ಮ ಸಂಪನ್ಮೂಲವು ಏನಾಗುತ್ತದೆ. ಎಂದರೆ ಅದನ್ನು ನಾವು ಊಹೆ ಮಾಡುವುದಕ್ಕೂ ಸಾಧ್ಯವಿಲ್ಲ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತೇನೆಂದರೆ, ಬಳ್ಳಾರಿ, ವಿಚಾರ, ಬಳ್ಳಾರಿ ಎಂದಾಗ ಬಳ್ಳಾರಿ ಬೇಡ

ಚಿಕ್ಕನಾಯಕನಹಳ್ಳಿ ಮತ್ತು ಶಿರಾ ವಿಚಾರವನ್ನು ಶುರು ಮಾಡುತ್ತೇನೆ, ನನ್ನ ತಾಲ್ಲೂಕು ಇರುವಂತಹದ್ದು, ತಾವು ಅಧ್ಯಕ್ಷ ಪೀಠದಲ್ಲಿ ಕುಳಿತಿರುವಂತಹದ್ದು ತಾವು ಗಡಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದೀರಿ. ನಿಮ್ಮದು ಹೆಚ್ಚಿನ ಜವಾಬ್ದಾರಿ ಇದೆ. ನನಗೆ ಬಹಳ ಸಂತೋಷ ಸಭಾಧ್ಯಕ್ಷರು ನಿಮಗೆ ಅವಕಾಶವನ್ನು ಕೋಟ್ಟು ಕುರ್ಚಿಯ ಮೇಲೆ ಕೂರಿಸಿದ್ದಾರೆ. ಗಡಿನಾಡಿನ ಪ್ರದೇಶದಲ್ಲಿ ಏನಾಗುತ್ತದೆ ಎಂಬುದು ಬಹಳ ಮುಖ್ಯವಾಗಿದೆ. ನನ್ನ ಶೀರಾ ಕ್ಷೇತ್ರವು ಕೂಡ 65 ಕಿ.ಮೀ. ಆಂಧ್ರದ ಗಡಿಪ್ರದೇಶಕ್ಕೆ ಬರುತ್ತದೆ. ಅಲ್ಲಿ ನಡೆಯುವಂತಹ ವ್ಯವಹಾರಗಳು ಏನು ಎಂದು ಗೊತ್ತಿದೆ. ಉದಾಹರಣೆಗೆ ನಮಗೆ ಈ ಎಣ್ಣೆ ಮಾಡುತ್ತಾರಲ್ಲಾ ಹೊಂಗೆಎಣ್ಣೆ, ಅಥವಾ ಹರಳೆಣ್ಣೆ, ಆತರಹ ಎಣ್ಣೆ ಅಲ್ಲ. ಕುಡಿಯುವ ಎಣ್ಣೆ, ಅದನ್ನು ಆ ರಾಜ್ಯದಿಂದ ಹೇಗೆ ತರುತ್ತಾರೆ, ಈ ರಾಜ್ಯದ ಗಡಿಯಿಂದ ಹೇಗೆ ತೆಗೆದುಕಂಡು ಹೋಗುತ್ತಾರೆ. ಇದು ಬಹಳ ಸುಲಭ, ಅಲ್ಲಿಯವರು ಇಲ್ಲಿಗೆ ಬರುತ್ತಿರುತ್ತಾರೆ. ಇಲ್ಲಿಯವರು ಅಲ್ಲಿಗೆ ಹೋಗುತ್ತಿರುತ್ತಾರೆ. ಎಲ್ಲಿ ಚೀಪಾಗಿ ಸಿಗುತ್ತದೆಯೋ ಅಲ್ಲಿಗೆ ಹೋಗಿ ಕುಡಿಯುತ್ತಿರುತ್ತಾರೆ. ಇದು ಸರ್ವೇಸಾಮಾನ್ಯವಾಗಿ ಗಡಿಪ್ರದೇಶದಲ್ಲಿ ಆಗುತ್ತಿರುವಂತಹ ಒಂದು ಸಂಗತಿ. ನಾನು ಏತಾಕ್ಕಾಗಿ ಹೇಳುತ್ತಿದ್ದೇನೆಂದರೆ, ಸರ್ಕಾರವು ಅತ್ಯಂತ ಎಚ್ಚರಿಕೆಯಿಂದ ಇರಬೇಕು. ಇದು ಗಡಿ ಪ್ರದೇಶದಲ್ಲಿ ಆಗುತ್ತಿರುವಂತಹದ್ದು. ಗಡಿ ಪ್ರದೇಶದಲ್ಲಿ ಅದಿರಿನ ವಿಚಾರಕ್ಕೆ ಬಂದಾಗ ಗಣಿಯಂತಹ ಮಹತ್ವದ ವಿಚಾರ, ಇವತ್ತು ಬಂಗಾರಕ್ಕಿಂತ ಹೆಚ್ಚಾಗಿ ಇದು ಡೈಮಂಡ್‌ಗೆ ಬೆಲೆ ಬರುವಷ್ಟರ ಮಟ್ಟಿಗೆ ಬೆಲೆ ಬಂದಿರುವಂತಹ ಕಬ್ಬಿಣದ ಅದಿರು, ಅದಿರಿಗೋಸ್ಕರ ಇವತ್ತು ಆ ನಿಕ್ಷೇಪ ನಮ್ಮ ರಾಜ್ಯದಲ್ಲಿರಬೇಕಾದಾಗ ಅದು ನಮ್ಮ ಸಂಪತ್ತು, ಕರ್ನಾಟಕಕ್ಕೆ ಸೇರಿರುವಂತಹ 6 ಕೋಟಿ ಜನರ ಸಂಪತ್ತಾಗಿದೆ. ಆ ಸಂಪತ್ತನ್ನು ಸಂರಕ್ಷಣೆ ಮಾಡುವುದೇ ಇಡೀ ಸಭೆಯ ಜವಾಬ್ದಾರಿಕೆ ಮತ್ತು ಆ ಕಡೆಗೆ ಗಮನವಿರಲಿ. ನಾವು ಇವತ್ತು ಬೆಳಿಗ್ಗೆ ಕೇಂದ್ರ ಸರ್ಕಾರವನ್ನು compliment ಮಾಡಿದ್ದೇವೆ. ಗಡಿ ವಿಚಾರದಲ್ಲಿ ಕೇಂದ್ರ ಸರ್ಕಾರವು ತಳೆದಂತಹ ನಿಲುವಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೀರಿ. ಬೆಳಗಾವಿ ನಮ್ಮದು ಎಂಬ ಕೂಗಿಗೆ ಇವತ್ತು ಕೇಂದ್ರ ಸರ್ಕಾರವು ಧ್ವನಿಯನ್ನು ಕೊಟ್ಟಿದೆ. ಕಾರಣವೇನೆಂದರೆ, ಇಲ್ಲಿ ಭಾವನಾತ್ಮಕವಾಗಿರುವಂತಹ ಒಂದು ಸಂಬಂದ ನಮ್ಮ ಗಡಿ, ನಮ್ಮ ರಾಜ್ಯ, ನಮ್ಮ ನೆಲ ಎನ್ನುವಂತಹದ್ದು ಆ ಗಡಿಗೆ ಒತ್ತನ್ನು ಕೊಟ್ಟಿರುವುದಕ್ಕೆ ಬಹಳ ಪ್ರಶಂಸೆಯಿಂದ ನಾವೆಲ್ಲರೂ ಕೂಡ ಸ್ವಾಗತವನ್ನು ಮಾಡಿದ್ದೇವೆ.

ಛೇರ್ಮನ್ : ಅನೇಕ ವರ್ಷಗಳಿಂದ ಇದ್ದಂತಹ ಒಂದು ಅಡಚಣೆಯನ್ನು ಕೇಂದ್ರಸರ್ಕಾರವು ನಿವಾರಣೆ ಮಾಡಿದೆ. ಇನ್ನು ಅನೇಕ ಸಮಸ್ಯೆಗಳನ್ನು ಕೇಂದ್ರ

ಸರ್ಕಾರವು ದೇಶದ ಹಿತದೃಷ್ಟಿಯಿಮದ ಮಾಡಬೇಕಾಗಿದ್ದು ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಛೇರ್ಮನ್‌ರವರೆ, ದೇಶದ ಸಮಗ್ರತೆಯನ್ನು ಸಾರ್ವಭೌಮತ್ವವನ್ನು ಉಳಿಸಿಕೊಂಡು ಕರ್ನಾಟಕದ ಸಾರ್ವಭೌಮತ್ವವನ್ನು ಕಾಪಾಡಿರುವಂತಹ ಕೇಂದ್ರ ಸರ್ಕಾರವು ದೂರದೃಷ್ಟಿಯಿರುವಂತಹ ಒಂದು ಸರ್ಕಾರ ಶ್ರೀ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್ ರವರು ಕೂಡ ಕೇವಲ ಗಡಿ ವಿಚಾರಕ್ಕೆ ಬಿಡಲಿಲ್ಲ ಅವರು ಈಗಾಗಲೇ ಸಾಕಷ್ಟು ರೀತಿಯಲ್ಲಿ ಗಡಿವಿಚಾರದಲ್ಲಿ ಗಡಿಭಾಗದಲ್ಲಿ ಸಿಗುವಂತಹ ನಿಕ್ಷೇಪದ ವಿಚಾರದಲ್ಲಿ ಸಾಕಷ್ಟು ಕಾಳಜಿಯನ್ನು. ವಹಿಸಿದ್ದಾರೆಂದುನಾವು ಹೇಳಬೇಕಾಗುತ್ತದೆ. ಇವತ್ತು ನಾವು ಯಾವುದೇ ವಿಚಾರ ಇರಬಹುದು. ನಾವು ಗಣಿ ವಿಚಾರದ ಬಗ್ಗೆ ಮಾತನಾಡಬೇಕಾದಾಗ ನಾವು ಯಾರನ್ನು ನಿರ್ದಿಷ್ಟವಾಗಿ ಗುರಿಯನ್ನಿಟ್ಟುಕೊಂಡು ಮಾತನಾಡುತ್ತೇವೆನ್ನುವಂತಹ ದೃಷ್ಟಿಯನ್ನು ನಾವು ಯಾರು ತಳೆಯಬಾರದು. ಬಹುಶಃ ಕೆಲವು ಅಂಕಿ ಅಂಶಗಳನ್ನು ನಾವು ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ ಇವತ್ತು ಈ ವಿಷಯ್ಯವನ್ನು ನಿರಂತರವಾಗಿ ಇಡೀ ರಾಷ್ಟ್ರದಲ್ಲಿ ಚರ್ಚೆಯಾಗುತ್ತಿರುವಂತಹ subject ಅಂತಹ ವಿಷಯವನ್ನು ನಾನು ಒಂದು ಗಂಟೆಯಲ್ಲಿ ಮಾತ್ರ ಪ್ರಸ್ಥಾಪಿಸಿ ಎಂದರೆ ಅದು ಸಾಧ್ಯವೇ? ನನ್ನ ಹತ್ತಿರ ಇರುವಂತಹ ಮಾಹಿತಿಯನ್ನು ನಾಲ್ಕು ದಿವಸವಾದರೂ ಕೂಡ ಚರ್ಚೆ ಮಾಡಬಹದು. ಇಲ್ಲಿ ನಾವು ಮೂಲಭೂತವಾಗಿರುವಂತಹ ಪ್ರಶ್ನೆಗಳನ್ನು ಎತ್ತಬಹುದು. ಒಂದೇ ಒಂದು ಕಾಗದವನ್ನು ನಾಣು ಓದುತ್ತೇನೆ. ಇವತ್ತು Divisional Forest Officer, Ananthpur ಅಂದರೆ ನಮ್ಮ District Officer ಇರುವಂತಹ ರೀತಿಯಲ್ಲಿ Divisional Forest Officer, ಒಂದು ಕಾಗದವನ್ನು ಬರೆದಿದ್ದಾರೆ. ಆ ಕಾಗದದ ಒಕ್ಕಣೆಯನ್ನು ನೀವು ಓದಿದರೆ ಬಹುಶಃ ಎಲ್ಲೋ ಒಂದು ಕಡೆಗೆ ನಾವು ಎಷ್ಟರಮಟ್ಟಿಗೆ ರಾಜ್ಯದ ಪ್ರುಕೃತಿ ಸಂಪತ್ತನ್ನು ನಿಧಿಯನ್ನು ಉಳಿಸಿಕೊಳ್ಳುವುದರಲ್ಲಿ ಸಫಲರಾಗಿದ್ದೇವೆ ಎನ್ನುವುದರ ಬಗ್ಗೆ ಇದು ತೋರಿಸುತ್ತದೆ ಮತ್ತು ಜವಾಬ್ದಾರಿಕೆಯಿಂದ ರಚನೆಯಾಗಿರುವಂಥ ಸರ್ಕಾರಗಳು ಎಷ್ಟರ ಮಟ್ಟಿಗೆ ನಡೆಯುತ್ತಿವೆ ಎನ್ನುವ ಬಗ್ಗೆ ಜನರಿಗೆ ಒಂದು ಊಹೆ ಮಾಡುವುದಕ್ಕೆ ಒಂದು ಮೈಲಿಗಲ್ಲಾಗುತ್ತದೆ. ಅದಕ್ಕೋಸ್ಕರವಾಗಿ ಯಥಾವತ್ತಾಗಿ ಎಲ್ಲಾ ಓದದಿದ್ದರೂ ಕೆಲವು ಪ್ಯಾರಾಗಳನ್ನು ಮಾತ್ರ ಓದುತ್ತೇನೆ, "Diversion of forest land towards renewal of mining lease from iron ore in Bellary range forest over an extent of 68.50 hectares. violation of agreement and conditions imposed by the Government of

India and the Government of Andhra Predesh". ಅದಕ್ಕೆ ಒಂದು ವರದಿಯನ್ನು ಕೊಡುತ್ತಾರೆ. "The records reveal that M/s Obalapuram Mining Co. Pvt. Ltd., has taken permits to the tune of 24 lakh tonnes which includes 24 lakh tonnes of lumps and 4 tonnes of fines for transportation of high grade materials from the lease hold area. if it was mined in the said 68.50 hectares of the lease hold area..." 68 ಎಕರೆಗೆ ಸೀಮಿತವಾಗಿರತಕ್ಕಂಥ ರೀತಿಯಲ್ಲಿ 27 ಲಕ್ಷ ಟನ್‌ಗೆ ಪರ್ಮಿಟ್ ಅನ್ನು ಪಡೆಯುತ್ತಾರೆ. "Taking advantage of the occassions of the Government memo dated 25-09-2009 M/s Obalapuram Mining Co. Pvt. Ltd. obtained from the Government of Andhra Pradesh dispensing with the requirements of the forest permits and you have also obtained the bulk permit from Mines and Geology Department appropriate the iron ore transported from the adjoining mines from Karnataka in which you have partnership. When compared to the Permits obtained for transportation of the minerals and the working on the Mining lease hold area, both do not correlate since the exposed and the excavated bits do not corespond to the iron ore Permits utilised. It is Impossible to produce such a huge quantity of iron ore after removing huge over burden. wastes from the excavated bits are from the physical workings as it exisits in the lease hold area. The iron ore deposited in the said lease hold area is not a primary deposit and it is a scattered deposit of very low grade iorn ore. For excavating such huge quanitity of iron ores lot of exvcavation and verification is needed. No scuh excavation is done in the mining lease area. The excavated bits are only two meters in depth. During the inspection time also, it is noticed that the Lorries coming from Karnataka and passing through the wide roads, illegally laid road in the lease hold area carrying high grade permits obtained from M/s Obalapuram Mining Co. Pvt. Ltd., were fully utilised for transportation of high grade iron ore minerals. It

means, mineral was brought from some other area i.e., outside the lease hold area which is a betting the inter-state boundary of Andhra Pradesh and Karnataka. I am of the prime-facie view that the mineral brought from Karnataka was transported".

ಶ್ರೀ ಜಗದೀಶ್ ಶೆಟ್ಟರ್ : (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ನನ್ನದು ಒಂದು point of order ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಮತ್ತು ಇತರರು ಒಂದು ನಿಲುವಳಿ ಸೂಚನೆ ತಂದಿದ್ದು, ಲೋಕಾಯುಕ್ತರಾದಂಥ ಶ್ರೀ ಸಂತೋಷ ಹೆಗ್ಡೆಯವರು ಯಾವ ಹಿನ್ನೆಲೆಯಲ್ಲಿ ರಾಜೀನಾಮೆ ಕೊಟ್ಟರು ಅದರ ಹಿನ್ನೆಲೆಯಲ್ಲಿ ತಾವು ಈ ನಿಲುವಳಿ ಸೂಚನೆಯನ್ನು ತಂದಿರಿ. ಅಲ್ಲಿ ಹಲವಾರು ವಿಷಯಗಳು ಅಡಕವಾಗಿದ್ದವು. ಅದು ನಿಯಮ 69ಕ್ಕೆ convert ಆಗಿ ಆ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. O.K., ಚರ್ಚೆ ಮಾಡಿ, ಜಸ್ಟೀಸ್ ಶ್ರೀ ಸಂತೋಷ್ ಹೆಗ್ಡೆಯವರು ರಾಜೀನಾಮೇಯನ್ನು ಯಾವ ಕಾರಣಕ್ಕಾಗಿ ಕೊಟ್ಟರು, ಏನು ಎನ್ನುವ ಹಿನ್ನೆಲೆಯಲ್ಲಿ ತಾವು ಚರ್ಚೆ ಮಾಡಬಹುದು. ಒಂದು ಈ ಗಣಿ ಬಗ್ಗೆ ನೀವು ನಿಲುವಳಿ ಸೂಚನೆಗೆ ಏನು notice ಕೊಟ್ಟಿದ್ದೀರಿ ಅದನ್ನು ತೆಗೆದು ನೋಡಿ. ಅಲ್ಲಿ ಯಾವುದೇ ಒಂದು ಕಂಪನಿ ಬಗ್ಗೆ specific ಆಗಿ ನೀವೇನಾದರೂ allegation ಮಾಡಿದ್ದೀರಾ? ಯಾವುದಾದರೂ ಕಂಪನಿ ಬಗ್ಗೆ specific ಆಗಿ charge ಮಾಡಿದ್ದೀರಾ? ಇದು ಸರಿಯಲ್ಲ. ನೀವು ಓಬಳಾಪುರಂ ಕಂಪನಿ ಬಗ್ಗೆ ಚರ್ಚೆ ಶುರು ಮಾಡಿದಿರಿ. ಅದರ ಬಗ್ಗೆ ಏನಾದರೂ specific ಆಗಿ notice ಕೊಟ್ಟಿದ್ದೀರಾ? ಅದರ ಮೇಲೆ allegation ಮಾಡಿ ಏನಾದರೂ notice ಕೊಟ್ಟಿದ್ದೀರಾ? ಅಲ್ಲಿ ಆ partners ಹೀಗೆ ಮಾಡುತ್ತಿದ್ದಾರೆ, ಹಾಗೆ ಮಾಡುತ್ತಿದ್ದಾರೆ ಎನ್ನುವ ಬಗ್ಗೆ specific ಆಗಿ ಏನಾದರೂ notice ಅನ್ನು ಅಧ್ಯಕ್ಷರಿಗೆ ಕೊಡಲಿ. ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ಅದಕ್ಕೆ ಸರ್ಕಾರವೂ ಉತ್ತರವನ್ನು ಕೊಡುತ್ತದೆ. ಯಾವುದೇ ಕಂಪನಿಯ ಬಗ್ಗೆ, ಯಾವುದೇ ಹೆಸರಿನ ಬಗ್ಗೆ, ನೀವು specific ಆಗಿ notice ಕೊಡದೆ ಈ ರೀತಿ ಒಂದು ಕಂಪನಿ ಹೆಸರನ್ನು ತೆಗೆದುಕೊಂಡು ನೀವು ಚರ್ಚೆ ಮಾಡುವಂಥದ್ದು, ಸರಿಯಲ್ಲ. ಅದಕ್ಕೆ ನನ್ನ point of order ಇದೆ. ಇನ್ನೊಂದು ವಿಷಯವೇನೆಂದರೆ, ಈ ಎಲ್ಲಾ ವಿಷಯಗಳ ಬಗ್ಗೆ ಆಂಧ್ರ ಪ್ರದೇಶದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನಲ್ಲಿ ಕೇಸ್ ಗಳು ಪೆಂಡಿಂಗ್ ಇವೆ. ಅದರ ಬಗ್ಗೆ survey ಮಾಡುವುದು, re-survey ಮಾಡುವುದು, still it is pending before the hon'ble Supreme Court. ಹಾಗಿದ್ದಾಗ ಇದು sub-judice ಆಗುತ್ತದೆ. Basic ಆಗಿ ನೀವು

specific ಆಗಿ notice ಕೊಡದೆ specific ಆಗಿ ಯಾವುದೇ ಕಂಪನಿ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ಮತ್ತೊಂದು ಏನೆಂದರೆ, ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇರುವುದರಿಂದ ಅದು sub-justice ಆಗುತ್ತದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮೊದಲು ಅದು clarify ಮಾಡಬೇಕಾಗಿದೆ.

ಛೇರ್ಮನ್ : ಆ ಕಂಪನಿ ಹೆಸರು ನಿಲುವಳಿ ಸೂಚನೆಯಲ್ಲಿ ಇಲ್ಲದೇ ಇರುವುದರಿಂದ ಆ ಹೆಸರನ್ನು ಹೇಳಿ ಮಾತನಾಡುವ ಅವಶ್ಯಕತೆ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು, ಹೆಸರನ್ನು ನಾವು ತೆಗೆದುಕೊಳ್ಳುವುದಿಲ್ಲ. ಬರೆದಿರುವ ಕಾಗದ ನೋಡಿ, ಜಗದೀಶ್ ಶೆಟ್ಟರ್‌ರವರೆ, ನಿಮ್ಮ position ನನಗೆ ಅರ್ಥವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಬೇಕಾದರೆ ಚರ್ಚೆ ಮಾಡಿ, ನಿಮಗೆ ಯಾರು ಬೇಡವೆನ್ನುತ್ತಾರೆ. ಸಭಾಧ್ಯಕ್ಷರು ಅನುಮತಿ ಕೊಟ್ಟರೆ ನೀವು ಯಾವುದೇ ಕಂಪನಿ ಬಗ್ಗೆ notice ಕೊಟ್ಟು, ಅದರ ಬಗ್ಗೆ allegation ಮಾಡಿ ಬೇಕಾದರೆ ಚರ್ಚೆ ಮಾಡಿ. ಆದರೆ vague ಆಗಿ ಯಾವುದೇ ಕಂಪನಿ ಬಗ್ಗೆ ಮಾತನಾಡುವುದು ಸರಿಯಲ್ಲ. ನಿಮ್ಮ ನಿಲುವಳಿ ಸೂಚನೆಯನ್ನು ತೆಗೆದು ನೋಡಿ.

ಶ್ರೀ ಟಿ.ಬಿ. ಜಯಚಂದ್ರ : ಈಗ ನನಗೆ ಅರ್ಥವಾಯಿತು ಬಿಟ್ಟುಬಿಡಿ. ನಾನು ಯಾವುದೇ ಕಂಪನಿಯ ಹೆಸರೆತ್ತುವುದಕ್ಕೆ ಹೋಗುವುದಿಲ್ಲ. ಆ ಕಂಪನಿಯ ವಿಚಾರವನ್ನೂ ಸಹ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ವಾಸ್ತವಿಕವಾಗಿ ಇರುವ ಸಂಗತಿ ಏನಿದೆ, ಬಹುಶಃ ತಾವು ಸ್ಪೀಕರ್ ಆಗಿ ಕೆಲಸ ಮಾಡಿದ ಶ್ರೀ ಜಗದೀಶ್ ಶೆಟ್ಟರ್‌ರವರಿಗೆ ನಾವು ಈ ರೀತಿಯಾದಂಥ ಭೋಧನೆ ಮಾಡುವಂತಿಲ್ಲ. ಸ್ವಲ್ಪ ಇರಿ, ನಾನು ಒಂದು ಮಾತು ಹೇಳಿಬಿಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಬಹಳ ವರ್ಷಗಳಿಂದ ಈ ಸದನದಲ್ಲಿದ್ದೀರಿ, ನಿಯಮ ಏನಿದೆ ಅದರ ಪ್ರಕಾರ ನೀವು ನಡೆದುಕೊಳ್ಳಬೇಕಷ್ಟೇ Specific ಆಗಿ ನೀವು ಓಬಳಾಪುರಂ ಕಂಪನಿಯ ಬಗ್ಗೆ notice ಕೊಡಿ, ಅದರ ಬಗ್ಗೆ ಚರ್ಚೆ ಮಾಡೋಣ, ಯಾರು ಬೇಡವೆನ್ನುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ನಾವು ನಿಯಮ 60 ರ ಅಡಿಯಲ್ಲಿ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟು ಅದಕ್ಕೆ ಕಾಲ ನಿಗದಿ ಮಾಡಿ, ಆಗ ಸೀಮಿತವಾದಂಥ ಚರ್ಚೆಯಾಗುತ್ತದೆ ಎಂದು ಹೇಳಿದೆವು, ನೀವು ಅದಕ್ಕೆ ಒಪ್ಪಲಿಲ್ಲ. ನೀವು ಬಹಳ argument ಮಾಡಿ ನಿಯಮ 69 ಕ್ಕೆ ತಂದಿರಿ. ಈಗ ನಿಮ್ಮ ಆಕ್ಷೇಪ ಏನು? ಓಬಳಾಪುರಂ ಕಂಪನಿಯ ಹೆಸರು ಎತ್ತಬಾರದು ಎಂಬುದೇ. ಆ ಹೆಸರು ಹೇಳಿದ ತಕ್ಷಣ ಶಾಕ್

ಹೊಡೆದಂತಾಗುತ್ತದೆ. ಬೇಡ ಬಿಡಿ, ಅದರಿಂದ ಇಡೀ ದೇಶಕ್ಕೆ ಶಾಕ್ ಹೊಡೆಯುತ್ತಿದೆ.

ಶ್ರೀ ನೇಮಿರಾಜ ನಾಯ್ಕ : ಮಾನ್ಯ ಅಧ್ಯಕರೇ ಇವರ ಕಾಲದಲ್ಲಿ, ಸಾಕಷ್ಟು ಕಂಪನಿಗಳು ಸಾಕಷ್ಟು ವ್ಯವಹಾರಗಳನ್ನು ಮಾಡಿರುವ ಉದಾರಣೆಗಳಿವೆ. ಆ ಕಂಪನಿಯ ಹೆಸರನ್ನು ಎತ್ತಿ ನಮಗೂ ಕೂಡ ಮಾತನಾಡಲಿಕ್ಕೆ ಅವಕಾಶ ಕೊಡಬೇಕು, ಆಗ ನಾವು ಮಾತನಾಡುತ್ತೇವೆ. ಏಕೆಂದರೆ 35 ವರ್ಷಗಳ ಹಿಂದೆ ಅಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ಪೂರ್ಣ details ಕೂಡ ಹೇಳುತ್ತೇವೆ ಆ ರೀತಿ ಮಾತನಾಡುವುದಕ್ಕೆ ಅವಕಾಶ ಇದ್ದರೆ ನಮಗೂ ಅವಕಾಶ ಕೊಡಿ ನಾವು ಮಾತನಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ಕಂಪನಿಯ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ ಕರ್ನಾಟಕದ ಸಂಪತ್ತು ಲೂಟಿ ಆಗಬೇಕಾದರೆ ಪ್ರಸ್ತಾಪ ಮಾಡಬಾರದೇ? ಏನಿದು? ಮತ್ತೆ ವಿಧಾನಸಭೆ ಏಕಿರಬೇಕು? " I am of the primafacie view that the mineral brought from the Karnataka was transported through mining lease hold areas and was sold from Andhra Pradesh. The physical feature of mine as exit today do not corroborate the origin of mineralfrom Andhra Pradesh. More importantly, if the materials are iron ore, if it is a huge quantity mined, they should have been corresponding waste dumps." Waste dumps ಇಲ್ಲದೆ automatic ಆಗಿ ಮಾಯ ಮಂತ್ರವಾಗಿ ಇವತ್ತು materials ಬರುವುದಕ್ಕೆ ಶುರುವಾಗಿದೆ. ನಾನು ಆ ಸಂಪತ್ತು ಹೇಗೆ ಲೂಟಿಯಾಗುತ್ತದೆ ಎನ್ನುವ ಬಗ್ಗೆ ಹೇಳಿದೆ. ಇವತ್ತು ಆ ಹಿನ್ನೆಲೆಯಲ್ಲಿಯೂ ಕೂಡ ನಮಗೆ ಕೇಂದ್ರದ ಶೀಲಾ ನಾಯರ್‌ರವರೂ ಕೂಡ ಒಂದು ಕಾಗದವನ್ನು ಬರೆದಿದ್ದರು. ನಾನು ಮತ್ತೆ ಮತ್ತೆ ಎಲ್ಲಾ ಕಾಗದಗಳನ್ನು ಓದಿ ಹೇಳುವ ಅವಶ್ಯಕತೆ ಇಲ್ಲ. ಬಹುಶಃ 5ನೇ ಜನವರಿ 2010 ರಂದು ಶೀಲಾ ನಾಯರ್‌ರವರು ಬರೆದಂಥ ಕಾಗದಕ್ಕೆ ಇವತ್ತು ಮುಖ್ಯ ಕಾರ್ಯದರ್ಶಿಗಳಿಗೆ ಉದ್ದೇಶಿಸಿ ಬರೆದಿರತಕ್ಕಂಥ ಕಾಗದದಲ್ಲಿ ಸುಪ್ರೀಂಕೋರ್ಟ್‌ನ ಆದೇಶಗಳೇನಿವೆ, ಅದಕ್ಕೆ permits ಹೇಗೆ increase ಆಗುತ್ತದೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವರೀತಿ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಕೇಂದ್ರ ಸರ್ಕಾರದ ನೀತಿ ಏನಿದೆ ಎಂಬ ಎಲ್ಲಾ ವಿಚಾರಗಳನ್ನೂ ಕೂಡ ಆ ಕಾಗದದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಇವತ್ತು ಅಳತೆ ಆಗುತ್ತಿರುವುದು ಒಂದು ಸಂತೋಷದ ಸಂಗತಿಯಾಗಿದೆ. ಮಾನ್ಯ ಅಧ್ಯಕ್ಷರೇ, ಒಂದು ಮುಖ್ಯವಾದ

ವಿಚಾರವೆಂದರೆ, ನಾವು ಮಾತನಾಡಬೇಕಾದಾಗ ಮಾನ್ಯ ಯಡಿಯೂರಪ್ಪನವರು ನನ್ನ ಬೊಕ್ಕಸತುಂಬಿಸುತ್ತೇನೆ, ಮೈನಿಂಗ್‌ಮಾಫಿಯಾಗೂ ನನಗೂ ಸಂಬಂಧವಿಲ್ಲವೆಂದು ಪದೇ ಪದೇ ಆ ಮಾತನ್ನು ಹೇಳುತ್ತಾರೆ. ದುಃಖದಿಂದ ಹೇಳುತ್ತಾರೆ, ಅತ್ತುಕೊಂಡು ಹೇಳುತ್ತಾರೆ, ಇಲ್ಲವೆಂದು ಹೇಳುತ್ತಾರೆ. ಏನೇನೋ ಬೇರೆ ಬೇರೆ ಹೇಳುತ್ತಾರೆ. ಆದರೆ, ಮೈನಿಂಗ್‌ಗೆ ಲಾರಿಗಳಿಂದ ಟೋಲ್ ಫೀ ಬಗ್ಗೆ 15-10-2009ಕ್ಕೆ ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದಿರು ಸಾಗಾಣಿಕೆಗೆ ಒಂದು ಸಾವಿರ ರೂಪಾಯಿ. ಅಂದ ಹಾಗೆ ನಿನ್ನೆಯೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಉತ್ತರ ಕೊಡಬೇಕಾದಾಗ ಎಷ್ಟು ಕಲೆಕ್ಟ್ ಆಗಿದೆ ಎನ್ನುವುದರ ಬಗ್ಗೆ ಹೇಳುತ್ತೇವೆ ಎಂದು ಹೇಳಿದ್ದಾರೆ. ಆ ಉತ್ತರವನ್ನು ನಾನು ಸ್ಪಷ್ಟವಾಗಿ ಬಯಸುತ್ತೇನೆ. ಆದು permit ಇದ್ದು, ಸಾಗಾಣಿಕೆ ಆಗಿರುವುದಕ್ಕೆ ಸಾವಿರ ರೂಪಾಯಿ ಜೊತೆಗೆ permit ಇಲ್ಲದೇ ಹೋಗಿರತಕ್ಕಂತಹ material ಇದೆಯೆಲ್ಲಾ, ಅದನ್ನು ಸಾವಿರ ರೂಪಾಯಿ ಕಟ್ಟಿ ಕೊಡುವವರು ಯಾರು ಎನ್ನುವುದು ಒಂದು ಪ್ರಶ್ನೆ, ಅದನ್ನು ಮುಂದಕ್ಕೆ ಹೇಗೆ ಎನ್ನುವುದನ್ನು ಹೇಳುತ್ತೇನೆ. ಈ ಲೋಕಾಯುಕ್ತರ ವರದಿಯಲ್ಲಿ ಒಂದಲ್ಲ, ಸುಮಾರು 69 ಮೈನ್ಸ್ ಬಗ್ಗೆ, ಒತ್ತುವರಿ ಬಗ್ಗೆ ಸಾಕಷ್ಟು ವಿಚಾರವನ್ನು ಕೂಡ ಇವತ್ತು ಹೇಳಿದ್ದಾರೆ. ಅದಲ್ಲದೇ, ಇವತ್ತು ಅವ್ಯಾಹತವಾಗಿ ನಡೆಯುತ್ತಿರುವ ಮೈನಿಂಗ್ ಎಲ್ಲಿ ಎನ್ನುವ ವಿಚಾರವನ್ನು ಇವತ್ತು ನಿಮ್ಮ ಗಮನಕ್ಕೆ ತರಬೇಕಾಗುತ್ತದೆ. ನಾವು ವಿಧಾನ ಸಭೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಬೇಕಾದಾಗ, ನನಗೆ ಇರತಕ್ಕಂತಹ ಮಾಹಿತಿ ಆಧಾರದ ಮೇಲೆ ರಾಜ್ಯದ ಸಂಪತ್ತು ಲೂಟಿ ಯಾಗುತ್ತಿರುವುದನ್ನು protect ಮಾಡತಕ್ಕಂತಹ ಜವಾಬ್ದಾರಿಕೆ ಸಚಿವ ಸಂಪುಟದ ಮೇಲಿದೆ. ಸಚಿವ ಸಂಪುಟ ಎಂದರೆ, it is the responsibility ensured under the Constitution, the ministerial responsibility in discharging their duties and administrative matters, in all other matters. If there is a failure on the part of the Government at the ministerial responsibility, I think Government cannot function. ಅದು ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಒಂದು ಮಾಹಿತಿ ಕೊಡುತ್ತೇನೆ. ಈ ಮಾಹಿತಿ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲೆಲ್ಲಿ illegal operation ನಡೆಯುತ್ತಿದೆ ಎನ್ನುವುದಕ್ಕೆ ಮಾಹಿತಿ ಕೊಡುತ್ತೇನೆ. ಯಾರು ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಏಕೆಂದರೆ, ಲೋಕಾಯುಕ್ತ ಕೊಟ್ಟಂತಹ ವರದಿಯನ್ನು ಕೂಡ investigate ಮಾಡಿದ್ದಾರೆ. ಆದರೆ, ಚಂಡು ಇರುವುದು ಇವತ್ತು ಸರ್ಕಾರದ ಮುಂದೆ. ಆ ಚೆಂಡನ್ನು ಹೇಗೆ, ಎಲ್ಲಿ, ಯಾವ ರೀತಿಯಾಗಿದೆ. ಎನ್ನುವುದನ್ನು ಪರಿಶೋಧನೆ ಮಾಡತಕ್ಕಂತಹ ಜವಾಬ್ದಾರಿಕೆ ಸರ್ಕಾರದ ಮುಂದೆ ಇದೆ. ಇದು ಒಂದು

information ರೆಕಾರ್ಡ್ಸ್‌ನಲ್ಲಿ ಇರಲಿ, ಮುಂದೆ ಬಂದಂತಹ ಪೀಳಿಗೆಯವರು ಸಹ ಸ್ವಲ್ಪ ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಇದು ಯಾವ ರೀತಿಯಾಗಿ ನಡೆಯುತ್ತಿತ್ತು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಇದೆ. ಮುಂದೆ ಬರತಕ್ಕಂತಹ ಜನ ಇದು ಆಗಲೇ ನಡೆಯುತ್ತಿತ್ತು ಈಗ ಇನ್ನೇನು ಎಂದುಕೊಳ್ಳುತ್ತಾರೋ ಅಥವಾ ಮುಂದೆ ಏನು ಮಾಡುತ್ತಾರೊ ಗೊತ್ತಿಲ್ಲ. ಅದು ಪ್ರಶ್ನೆ ಬೇರೆ. AML area of Shakuntala Devi, Veem mines area encroach the Dalmia area, N. Rathnaiah, Vittalapura ಇನ್ನೂ renew ಆಗಿಲ್ಲ, ಸಾರಾಸಗಟಾಗಿ ನಡೆಯುತ್ತಿದೆ. ರಾಜಾಪುರ ಮೈನ್ಸ್ ವೈದ್ಯಬಾಯಿ, forest ನಲ್ಲಿ encroch ಮಾಡಿದ್ದಾರೆ. ಕೇಳುವವರು ಇಲ್ಲ, ಹೇಳುವವರು ಇಲ್ಲ. Ramghad area of Survey No. 20, ಆದರ್ಶ ಮೈನ್ಸ್ ಪಕ್ಕದಲ್ಲಿರತಕ್ಕಂತಹದ್ದು. ಅದು ಯಾರದೋ ನನಗಂತೂ ಅರ್ಥವಾಗಿಲ್ಲ. Between Lakshmi narayana Company and Chowgale Mining Company, ಸಿದ್ದಾಪುರ Forest area ಇದನ್ನು ಈಗ ಮಾನ್ಯ ಲೋಕಾಯುಕ್ತರು ಹೋದಮೇಲೆ ಸ್ವಲ್ಪ ನಿಯಂತ್ರಣ ಆದ ರೀತಿಯಲ್ಲಿ ಕಾಣುತ್ತಿದೆ ಅಷ್ಟೆ. S.B. minerals, Dalmia, M.L. No. 2550 encroaching the Dalmia Mines ಎಲ್ಲಾ illegal stockyards ಅನ್ನು cancel ಮಾಡುತ್ತೇವೆ ಎಂದು ನಿನ್ನೆ ಹೇಳಿದರು. Lakshmi Minerals, P.K. Halli railway station, Dalmia Mines P.K. halli Shathalakshmi jayaram, Vrishabendraiah Mines. ಇದು stockyards ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಂದು ಬಾರಿ ನೋಡಿಕೊಂಡು ಬಂದರೆ ಒಳ್ಳೆಯದು. ಇಲ್ಲದಿದ್ದರೆ ಬನ್ನಿ ಮಾನ್ಯ ಅಧ್ಯಕ್ಷರೆ ನಾನು ನೀವು ಹೋಗೋಣ. ಅಲ್ಲಿ ಏನಾಗಿದೆ ಎಂದು ನಾವು ವಸ್ತುಸ್ಥಿತಿಯನ್ನು ತಿಳಿಯೋಣ, ನಮ್ಮ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಾಗಲಿ.

ಒಬ್ಬ ಮಾನ್ಯ ಸದಸ್ಯರು: ನೀವು ಹೇಳತಕ್ಕಂತಹದ್ದು ಸತ್ಯಕ್ಕೆ ಬಹಳ ದೂರವಾದುದು.

ಶ್ರೀ ಟಿ.ಬಿ. ಜಯಚಂದ್ರ : ಆಮೇಲೆ Rising Contract. Rising contract ಎಂದರೆ I din't Know whetehr it is allowed in law or not. But somehow it is allowed in mining activity, Rising contrat ಎಂದರೆ, ಯಾರದೋ ಮೈನ್ಸ್ ಯಾರೋ ಮೈನ್ ಮಾಡುವುದು. ಈ rising contract ತಪ್ಪು ಎನ್ನುವ ರೀತಿಯಲ್ಲಿ ಆದರೆ, ಮೈನ್ಸ್ ತೆಗೆದುಕೊಳ್ಳುವುದು ಯಾರಿಗೋ ಕೊಟ್ಟುಬಿಡುವುದು. ಕೊಟ್ಟುಬಿಟ್ಟು ಇದನ್ನು rising ಮಾಡುವುದು. ಶರದ್‌ಶ್ಚಂದ್ರ, ಜಯಸಿಂಗಾಪುರ, ತಾಜಾಪುರ ಮೈನ್ಸ್, ಟ್ರೈಡೆಂಟ್ ಮಿನರಲ್ಸ್ ಹೆಚ್.ಆರ್. ಗವಿಯಪ್ಪ, ಮೆಹಬೂಬ್ ಟ್ರಾನ್ಸ್‌ಪೋರ್ಟ್, ರತ್ನಯ್ಯ, ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ, ರಾಮ್‌ಘಡ್, ಕೆ.ಎಂ. ಪಾರ್ವತಮ್ಮ ಅಸೋಸಿಯೇಟೆಡ್

ಮೈನ್ಸ್, ಅಶ್ವಥ್ ನಾರಾಯಣ್ ಸಿಂಗ್, ಕುಮಾರ್‌ಸ್ವಾಮಿ ಮೈನಿಂಗ್ ಕಂಪನಿ, ಸ್ಟಾರ್ಕ್ ಲೈನ್ಸ್, ವೃಷಬೇಂದ್ರಯ್ಯ, NMDC. ಇದು ನಡೆಯುತ್ತಿರುವುದು. ಇಲ್ಲಿಯವರೆಗೂ ಏನು ಹೇಳುವುದಕ್ಕೆ ಪ್ರಯತ್ನಪಟ್ಟಿದ್ದೀರಿ ಎಂದರೆ, ನಮ್ಮಲ್ಲಿ ಮೈನಿಂಗ್ ಏರಿಯಾ ಇಲ್ಲವೆಂದು ಹೇಳುತ್ತೀರಿ. ನಮ್ಮ ರಾಜ್ಯದಲ್ಲಿ ಮೈನಿಂಗ್ ಏರಿಯಾ ಇಲ್ಲದೇ ಇದ್ದರೂ ಸಹ ಇವತ್ತು ಸಾವಿರಾರು ಕೋಟಿ ರೂಪಾಯಿಗಳಷ್ಟು ಅದಿರು ಆಚೆ ಹೋಗುತ್ತಾ ಇರಬೇಕಾದಾಗ ಹೇಗೆ ಹೋಗುತ್ತಿದೆ ಎನ್ನುವುದು ಪ್ರಶ್ನೆ. ಆ ಯಕ್ಷ ಪ್ರಶ್ನೆಗೆ ಉತ್ತರ ಕೊಡುವುದಕ್ಕೋಸ್ಕರವೇ ಇವತ್ತು ನಾವು ಇದನ್ನು ಚರ್ಚೆ ಮಾಡುವುದಕ್ಕೆ ನಿಂತಿದ್ದೇವೆ. ನಾನು ಒಂದು ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಪರ್ಮಿಟ್‌ಗಳನ್ನು seize ಮಾಡಿರುವುದನ್ನು ಇವತ್ತು ನೀವು ನೋಡಿದ್ದೀರಿ 8 gunny bags of permits ಎಲ್ಲಿ ಪ್ರಿಂಟ್ ಆಗಿವೆ ಎಂದರೆ, Xerox copies ಎಲ್ಲಿ ಪ್ರಿಂಟ್ ಆಗಿದೆ ಎಂದರೆ, ಬೇಕಾದರೆ address ಕೊಡುತ್ತೇನೆ ಹುಬ್ಬಳ್ಳಿಯಲ್ಲಿಯೇ ಪ್ರಿಂಟ್ ಆಗಿರುವುದು ಎಲ್ಲಿಯೂ ಆಗಿಲ್ಲ. ನಾನು ನಿಜವಾಗಲೂ ಕೂಡ ಸರ್ಕಾರಕ್ಕೆ ಒಂದು ಸವಾಲು ಹಾಕುತ್ತೇನೆ. ನಿಮಗೆ ನಿಜವಾಗಲೂ ಕೂಡ ತಾಕತ್ತು ಎನ್ನುವುದು ಇದ್ದರೆ ದಯಾಮಾಡಿ ಆಂಧ್ರದಿಂದ ಪ್ರಯೋಜನ ಪಡೆದುಕೊಂಡು ಮಾಡುತ್ತಿದ್ದಾರಲ್ಲಾ ಅದನ್ನು ನಿಲ್ಲಿಸಿ, ನಿಮಗೆ ತಾಕತ್ತು ಇದ್ದರೆ ಅದನ್ನು ಮಾಡಿ, ತಾಕತ್ತಿನ ಜೊತೆಗೆ ಮನಸ್ಸು ನಿಮಗೆ ಬರಲಿ ಎನ್ನುವ ಉದ್ದೇಶಕ್ಕೋಸ್ಕರ ನಾನು ಇಷ್ಟೆಲ್ಲಾ ಹೇಳುತ್ತಿದ್ದೇನೆ. ಇದರ ಜೊತೆಗೆ ನನ್ನ ಹತ್ತಿರ ಇರತಕ್ಕಂತಹ ಪಟ್ಟಿಗಳನ್ನೆಲ್ಲಾ ನಾಣು ಹೇಳುತ್ತಾ ಹೋದರೆ ಬಹುಶಃ ಅದು ಎಷ್ಟು ಆಗುತ್ತದೋ ಗೊತ್ತಿಲ್ಲ. ಸುಮಾರು ನನಗೆ ಗೊತ್ತರಿವ ಪ್ರಕಾರ 99 ಮೈನ್ಸ್‌ಗಳಲ್ಲಿ ಇವತ್ತು ಅತಿಕ್ರಮ ಪ್ರವೇಶ ಮಾಡಿ, ಇವತ್ತು ಬುಹುತೇಕ ಅರಣ್ಯ ಪ್ರದೇಶದಲ್ಲಿ ಮತ್ತು ರೆವಿನ್ಯೂ ಲ್ಯಾಂಡ್ಸ್‌ನಲ್ಲಿ exploit ಮಾಡಿ ಇವತ್ತು ಕಳುಹಿಸುತ್ತಿದ್ದಾರೆ ಎಂದು ಹೇಳಿದರೆ, ಇವತ್ತು ರಾಜ್ಯ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ ಎಂದರೆ, ಇದಕ್ಕೆ ಏನು ಹೇಳಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಬಹುಶಃ ಅವಶ್ಯಕತೆ ಬೇಕು ಎಂದು ಹೇಳುವುದಾದರೆ, ಅದನ್ನು ಅಲ್ಲಗಳೆಯುವುದಾದರೆ ನಾನು ಎಲ್ಲಾ ಮಾಹಿತಿಯೂ ಕೂಡ ಕೊಡುವುದಕ್ಕೆ ತಯಾರಾಗಿದ್ದೇನೆ. ಇವತ್ತು ಈ ವಿಚಾರ ಕೇವಲ ಇದು ರಾಜ್ಯಕ್ಕೆ ಸೀಮಿತವಾಗಿರುವ ವಿಚಾರ ಅಲ್ಲ. ಇವತ್ತು ಆಂದ್ರ ವಿಧಾನಸಭೆಯಲ್ಲಿ ಧ್ವನಿ ಎತ್ತುತ್ತಿದ್ದಾರೆ. ಕರ್ನಾಟಕ ವಿಧಾನಸಭೆಯಲ್ಲಿ ಧ್ವನಿ ಎತ್ತಿದ್ದಾರೆ. ರಾಜ್ಯದ ರಾಷ್ಟ್ರದ ಪ್ರಮುಖ ನಾಯಕರೆಲ್ಲರೂ ಕೂಡ ಧ್ವನಿಗೂಡಿಸುತ್ತಿದ್ದಾರೆ, ಅಕ್ರಮ ಗಣಿಗಾರಿಕೆ ನಿಲ್ಲಬೇಕು ಅದು ಆಗಬಾರದು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಎಂತೆಂತಹ ಮಾತುಗಳನ್ನು ಹೇಳುತ್ತಿದ್ದಾರೆ, ದೊಡ್ಡ ದೊಡ್ಡ ನಾಯಕರು ಹೇಳುವಂತಹ ಮಾತುಗಳನ್ನು ನಾವು ಎಲ್ಲೋ ಒಂದು ಕಡೆ ಕೇಳಬೇಕಾಗುತ್ತದೆ.

ಹಿರಿಯರು, ಆಡಳಿತ ಅನುಭವಿಗಳು, ಹೇಳಿದ ಮಾತುಗಳಲ್ಲಿ ನಾವು ಸತ್ಯಾಂಶ ಕಂಡುಹಿಡಿಯಬೇಕಾಗುತ್ತದೆ.ಅವರು ಏನೋ ಹೇಳಿದರು, ಏಕೋ ಹೇಳಿದರು ಎನ್ನುವ ದೃಷ್ಟಿಯಿಂದ neglect ಮಾಡುವುದು. ಅಲ್ಲ. ಏಕೆಂದರೆ, ನಮ್ಮ ಎಲ್ಲರ ಗುರಿಯೇನು? ನಮ್ಮ ಸಂಪತ್ತನ್ನು ಸಂರಕ್ಷಣೆ ಮಾಡಬೇಕು. That is the basis ಅದಕ್ಕೆ ಒಂದು ಮಾತನ್ನು ಹೇಳುತ್ತಾರೆ, "we have to save the nation's wealth from mining mafia." This is the statement of the former Chief Minister Mr. Chandra babu Naidu. ಅವರು ಏನು ಹೇಳುತ್ತಾರೆ ಎಂದರೆ, he demands " Centre should immediately ask the CBI to probe the activities of this illegal mining. Who is behind, what is the extent of their wealth and bring out how various lasws of land, particularly, those related to forest, mining, export and revenue were violated." And prosecute those involved in it. The Center should come out with a clear mining policy to protect the mining wealth for the future generation. Mining leases should be given carefully. ಅದನ್ನು mining policy ಯಲ್ಲಿ ತಂದು ಜಾರಿಗೆ ಆಗಲಿಲ್ಲವೆಂದರೆ ಏನು ಪ್ರಯೋಜನ? ಅದು ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಅದರ ಕಡೆಗೆ ನಾವು ಹೆಚ್ಚು ಗಮನ ಕೊಡಬೇಕಾಗುತ್ತದೆ. After series of stern launched by us and because of our pressure we wrote to the Centre seeking necessity of a probe that to mainly probe the boundary dispute between Andhra and Karnataka. The boundary survey No. could be done by the survey of India. What we want is investigation into the illegal mining. How they have done it, how much money was transacted. these are all the issues. They can't seal the scandal. I don't say all those in these two parties are involved. They don't put an end to it. ಅಂಥವರೂ ಕೂಡ ಗಣಿಗಾರಿಕೆ ಬಗ್ಗೆ ಅಷ್ಟರಮಟ್ಟಿಗೆ ಧ್ವನಿಗೂಡಿಸಿ, ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿಗಳನ್ನು ನೋಡುವುದಕ್ಕೆ ಹೋಗಿ, ಆ ಭಾಗದ ಎಲ್ಲಾ ಶಾಸಕರು, ಕೂಡ ಹೋಗತಕ್ಕಂಥ ಕೆಲಸವನ್ನು ಮಾಡಿದರು. ಇಲ್ಲಿ ಏನಾಗಿದೆಯೆಂದರೆ, ಈ ವಿಚಾರ ಕೇವಲ ರಾಜ್ಯಕ್ಕೆ ಸೀಮಿತವಾಗಿಲ್ಲ. It is a national problem and international problem Parliament ನಲ್ಲಿ ಯಾರಾದರೂ rise ಮಾಡುತ್ತಾರೆ. ಎಂದು ನನಗನಿಸುತ್ತದೆ. ಇವತ್ತು ಅಕ್ರಮವಾಗಿ

ಗಣಿಗಾರಿಕೆಯಿಂದ ಬಂದಂಥ ಹಣದಿಂದ ರಾಜಕೀಯದಲ್ಲಿ ಅದು ಪ್ರಯೋಗವಾಗಿ ಪ್ರಜಾಪ್ರಭುತ್ವದ ಬೇರು ಅಲ್ಲಾಡುತ್ತಿದೆ. ಅದನ್ನು ಕೇವಲ ರಾಜ್ಯದಲ್ಲಿ ಸೀಮಿತವಾಗಿ ಚರ್ಚೆ ಮಾಡುತ್ತಿಲ್ಲ. ನಾನು ಮೊನ್ನೆ ದೆಹಲಿಗೆ ಹೋದಾಗ ಕೆಲವು ವಿಚಾರಗಳನ್ನು ಕೇಳಿದೆ, ಪೇಪರ್‌ಗಳಲ್ಲಿ ಬಂದಿದೆ, ಮಾನ್ಯ ಅಧ್ಯಕ್ಷರೆ, ತಮಗೆ ಕಳುಹಿಸಿಕೊಡುತ್ತೇನೆ. ತಾವು ನೋಡಬೇಕು. Mafia printing permits, Nocs, iron ore exported illegally to take massive profits. This is reported in the Delhi papers. Mine lords loot Government of crores iron ore royalty. 2003–04 ರಲ್ಲಿ 23 ಡಾಲರ್ ಇತ್ತು. ಇವತ್ತು 159 ಡಾಲರ್ ಆಗಿದೆ. ಸರ್ಕಾರಕ್ಕೆ 27 ರೂಪಾಯಿ ಬರುತ್ತದೆ. ಅವರಿಗೆ ಬರುವುದು 7 ರಿಂದ 8 ಸಾವಿರ ರೂಪಾಯಿ See the magnitude. ನಾನು ಪ್ರಾರಂಭದಲ್ಲಿ ಸಂವಿಧಾನವನ್ನು quote ಮಾಡಿ ಒಂದು ಮಾತನ್ನು ಹೇಳಿದೆ, Fundamental Duties of the State, ಅಂದರೆ ಅಕ್ರಮವಾಗಿ ಇವತ್ತು ಹಣ ಒಂದು ಕಡೆ ಕೇಂದ್ರೀಕೃತವಾಗುವ ಬಗ್ಗೆ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಹೇಳಿದೆ. ಅದನ್ನು ಓದಿ ಹೇಳಿದೆ. ಮತ್ತೆ ಅದನ್ನು ಓದಿ ಹೇಳತಕ್ಕಂಥ ಅವಶ್ಯಕತೆ ಇಲ್ಲ. ಆ ರೀತಿಯಾಗಿ ಅಕ್ರಮವಾಗಿರುವ ಹಣ ಒಂದು ಕಡೆ ಶೇಖರಣೆಯಾಗಬೇಕಾದಾಗ ಅದರ ಕಡೆಗೆ ಸರ್ಕಾರ ಗಮನ ಕೊಡುವುದಿಲ್ಲ. ನನಗೇನೂ ಗೊತ್ತಿಲ್ಲ. ಎನ್ನುವ ರೀತಿಯಲ್ಲಿ ಸುಮ್ಮನೆ ಇದೆ ಎಂದರೆ ನಾನು ಏನು ಹೇಳಬೇಕು ? ಮಾಧ್ಯಮದಲ್ಲಿ Natioanl paper ನಲ್ಲಿ ಬರತಕ್ಕಂಥದ್ದು, Bellary Mines Lords run parallel Government. This is the State of Affairs in the Country. ಬಹಳ ಚೆನ್ನಾಗಿದೆ. ಇವೆಲ್ಲಾ print ಮಾಡಿರುವ copies ಅನ್ನು ನಾನು ತಂದಿದ್ದೇನೆ. How come the Collector come to the aid of 3,000 crore mining parties? This is the caption given. A mining empire that startles Andhra and Karnataka strikes fears in rival is called by nexus of politicians and officials a blurring loop holes in the regulatory apparatus. Should we not take note of this as a Government? Then, what is the duty of the Government Are you a silent spectator of all these things? Whether you are colluded ? This is the question before us, This is the question before the people of Karantaka? Independent republic of Mine Mafia. ಎಲ್ಲಿಗೆ ಹೋಯಿತು ಅಂದರೆ ಆದ್ಯಕ್ಷರೆ, Republic of India ಅಲ್ಲ. Republic of mine Mafia of India. These have

all come out in leading papers in Delhi. ಎಲ್ಲಾ ಓದುವುದಕ್ಕೆ ಹೋದರೆ ನಿಮಗೆ ಸಿಟ್ಟು ಬರುತ್ತದೆ ಅದ್ದರಿಂದ ನಾನು ಓದುವುದಕ್ಕೆ ಹೋಗುವುದಿಲ್ಲ.

ಶ್ರೀ ಜಿ. ಜನಾರ್ದನ ರೆಡ್ಡಿ : ಮಾನ್ಯ ಅಧ್ಯಕ್ಷರೆ ಓದಿ, ಓದಿ ಇನ್ನು ನಾಲ್ಕು ದಿವಸ ಬೇಕಾದ್ದರೆ ಓದಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಜನಾರ್ಧನ ರೆಡ್ಡಿಯವರೆ ನಾನು ನಿಮ್ಮ ಸುದ್ದಿ ಎತ್ತಿದ್ದೇನೆ? ಓಬಳಾಪುರಂ ಸುದ್ದಿ ಎತ್ತುವುದಕ್ಕೆ ಹೋಗಬೇಡಿ ಎಂದು ಹೇಳಿದಿರಿ. ನಾನು ಅದರ ಸುದ್ದಿ ಎತ್ತುವುದಕ್ಕೆ ಹೋಗುವುದಿಲ್ಲ. ಓಬಳಾಪುರಂ ಅಥವಾ ಇನ್ಯಾವುದೇ ಕಂಪನಿಯಾಗಲಿ, ಯಾರಾದರೂ ಬಂದು ಲೂಟಿ ಮಾಡಲಿ ನನಗೇನು ಆಗಬೇಕಾಗಿತ್ತು?

ಶ್ರೀ ಜಿ. ಜನಾರ್ಧನ ರೆಡ್ಡಿ: ಇನ್ನೂ ನಾಲ್ಕು ದಿವಸ ಬೇಕಾದರೆ ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ : ಅದಕ್ಕೋಸ್ಕರವೇ ನಾವು ಇಲ್ಲಿ ಇರುವುದು. I am not worried. This report is before the Government. It is the duty of the Government to investigate.

ಶ್ರೀ ಕೆ. ನೇಮಿರಾಜ ನಾಯ್ಕ : ಮಾನ್ಯ ಅಧ್ಯಕ್ಷರೇ, ಮಾತು ಮಾತಿಗೆ ಅದನ್ನೆಲ್ಲಾ ಓದಿದರೆ ಸಿಟ್ಟು ಬರುತ್ತದೆ ಎಂದು ಹೇಳುವ ಪ್ರಶ್ನೆ ಏನಿದೆ ಎನ್ನುವುದನ್ನು ಅವರು ಹೇಳಲಿ. ಅವರು 35 ವರ್ಷದಿಂದ ಏನು ಮಾಡಿದ್ದಾರೆ ಅದನ್ನು ತೆಗೆಸಲಿ, ನೀವು ಏನು ಮಾಡಿಕೊಂಡು ಬಂದಿದ್ದೀರಿ, ಏನು ಮಾಡಿಲ್ಲ ಏನ್ನುವ ಎಲ್ಲಾ details ಇವೆ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಆಯಿತು, ಬೇಕಾದರೆ ಇದೆಲ್ಲಾ ಬಂದಿರತಕ್ಕಂಥದ್ದು ಸುಳ್ಳು ಎಂಉ ಹೇಳಿಬಿಡಲಿ.

ಶ್ರೀ ಕೆ. ನೇಮಿರಾಜ ನಾಯ್ಕ: ಮಾನ್ಯ ಅಧ್ಯಕ್ಷರೇ, ಬರೀ ಅದೇ ಬಂಡಿ ಹಾವು ಬಿಡುವಂಥ ಕೆಲಸವನ್ನು ಮಾಡುತ್ತಾರೆ, ಬೇರೆ ಏನೂ ಇಲ್ಲ.

ಅಧ್ಯಕ್ಷರು : ಅವರು Yield ಆಗಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಒಟ್ಟಿಗೆ ಎಲ್ಲವನ್ನೂ ನೋಡಿದರೆ, ವಾಸ್ತವಾಂಶ ಏನು ಎನ್ನುವುದು ಗೊತ್ತಾಗುತ್ತದೆ. ಪಾಪ ಅವರು ಅಭಾಸರಾಗಿಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ: ನಮ್ಮ ರಾಜಕೀಯದಲ್ಲಿ ಒಂದು ಕೆಟ್ಟ ಚಾಳಿ ಎಂದರೆ, ಯಾರೇ, ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ನಾವು ಸ್ವಾಭಾವಿಕವಾಗಿ, ನಾನು ಮಂತ್ರಿಯಾದರೆ ನನಗೆ ಬೇಕಾದವರು ನಮ್ಮ ಜಾತಿಯವರನ್ನು ಹಾಕಿಕೊಳ್ಳುವುದಿಲ್ಲ. ಒಬ್ಬ ಮುಖ್ಯಮಂತ್ರಿಯಾದರೆ ಅವರು confident ಆಗಿರತಕ್ಕಂಥವರು ಅವರವರ ಜಾತಿಯವರನ್ನೇ ಹಾಕಿಕೊಳ್ಳುವುದು.ತೋರಿಕೆಗೆ ಯಾರೋ ಒಬ್ಬರು ಇರುತ್ತಾರೆ ಅದು ಬೇರೆ ಪ್ರಶ್ನೆ. ಅದರೆ ಎಲ್ಲೋ ಒಂದು ರೀತಿಯಲ್ಲಿ ಈ ಕೆಟ್ಟ ಚಾಳಿ ಎಲ್ಲಾ ರಾಜಕೀಯ ಪಕ್ಷದಲ್ಲಿ ನಡೆದಿದೆ. ನಮಗೇನೂ ಹೊರತಾಗಿದೆ ಎಂದು ಅಲ್ಲ.

ಒಬ್ಬ ಮಾನ್ಯ ಸದಸ್ಯರು: ಅದನ್ನು ನೀವೇ ತೋರಿಸಿರುವುದು.

ಶ್ರೀ ಟಿ.ಬಿ. ಜಯಚಂದ್ರ : ಹೌದು, ಅದನ್ನು ನಾವೇ ತೋರಿಸಿರುವುದು ನಾವು 45 ವರ್ಷ ಆಳಿರುವುದು. ನೀವೆಲ್ಲಾ ಈಗ ಬಂದು ಕುಳಿತ್ತಿದ್ದೀರಿ. ಎರಡೇ ವರ್ಷ ಆಗಿರುವುದು. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರಲ್ಲಾ '45 ವರ್ಷಗಳಲ್ಲಿ ನೀವು ಮಾಡದೇ ಇರುವುದನ್ನು ನಾವು ಎರಡೇ ವರ್ಷಗಳಲ್ಲಿ ಮಾಡಿದ್ದೇವೆ ಎಂದು ಅದಕ್ಕೇ ಬರುತ್ತಿರುವುದು. ಎರಡೇ ವರ್ಷಗಳಲ್ಲಿ ನೀವು ಏನು ಮಾಡಿದ್ದೀರಿ ಎನ್ನುವುದು ಇಡೀ ಪ್ರಪಂಚಕ್ಕೇ ಗೊತ್ತಾಗಿದೆ. ಇಡೀ ದೇಶಕ್ಕೆ ಗೊತ್ತಾಗಿದೆ. ಮಾನ್ಯ ಅಧ್ಯಕ್ಷರೆ ಇಲ್ಲಿ ಏನಾಗಿದೆ ಎಂದರೆ, ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಒಂದು ಸಂದರ್ಭದಲ್ಲಿ ಇರಬೇಕಾಗಿತ್ತು ಪ್ರಶ್ನೆಯನ್ನು ಕೇಳುತ್ತಿದ್ದೆ. ನಿಜವಾಗಿಯೂ ಅವರು ಈ ರಾಜ್ಯದ ಮುಖ್ಯಮಂತ್ರಿಗಳಾ? ಅವರು ಮುಖ್ಯಮಂತ್ರಿಯಾಗಿ, ಆ powers, responsibilities ಅನ್ನು exercise ಮಾಡುವಂಥ ತಾಕತ್ತು ಇದೆಯೇ? ಏಕೆಂದರೆ, ಯಾರೋ ಒಬ್ಬರು ಅಧಿಕಾರಿಯನ್ನು ಹಾಕುತ್ತಾರೆ, ಇನ್ನು 15 ದಿವಸ ತಿಂಗಳಿಗೆ ಅದೇ ಅಧಿಕಾರಿ ಮತ್ತೆ ವಾಪಸ್ಸು ಬರುತ್ತಾರೆ ಎಂದರೆ, ಹೆಲಿಕಾಪ್ಟರ್‌ನಲ್ಲಿ ಇಳಿದು ಬಳ್ಳಾರಿಗೆ ಹೋದರೆ ಅವರನ್ನು ಮಾತನಾಡಿಸುವುದಕ್ಕೆ ಒಬ್ಬ ಅಧಿಕಾರಿಯೂ ಬರುವುದಿಲ್ಲವೆಂದರೆ, is it not a failure of administration ಮಾನ್ಯ ಜಗದೀಶ್ ಶೆಟ್ಟರ್‌ರೆ ? ನಾಳೆ ದಿವಸ ನೀವೇ Chief Minister ಆಗುತ್ತೀರೆಂದು ಇಟ್ಟುಕೊಳ್ಳಿ ಆಗ ಇಂಥ humiliation.

ಶ್ರೀ ಜಗದೀಶ್ ಶೆಟ್ಟರ್ : ಇದು ಎಷ್ಟನೇ ಬಾರಿ statement ಮಾಡುತ್ತಿರುವುದು? ನೀವು ಹೇಳುತ್ತೀರಿ, ನಿಮ್ಮ ನಾಯಕರು, ಹೇಳುತ್ತಾರೆ, ಇನ್ನೂ ಎಷ್ಟು ಸಲ ಹೇಳಬೇಕೆಂದು ಮಾಡಿದ್ದೀರಾ?

ಶ್ರೀ ಟಿ.ಬಿ. ಜಯಚಂದ್ರ : ನಿಮ ಆಸೆ, ನಿಮ್ಮ ಅಂತರಾಳದ ಆಸೆ, ನೀವು ಯಾವ

ರೀತಿಯಿಂದ ಮಂತ್ರಿಗಳಾಗಿ ಪೀಠದಿಂದ ಇಲ್ಲಿ ಬಂದು ಕುಳಿತ್ತಿದ್ದೀರಿ ಎನ್ನುವುದು ಗೊತ್ತಿದೆ. ನಿಮಗೆ ನಮ್ಮ ಸಂಪೂರ್ಣ ಸಹಕಾರ ಇದೆ.

ಅಧ್ಯಕ್ಷರು : ವಿಷಯಾಂತರ ಬೇಡ.

ಶ್ರೀ ಟಿ. ಬಿ. ಜಯಚಂದ್ರ : ನೀವು ರಾಜ್ಯದ ಮಂತ್ರಿಗಳಾಗಬೇಕು. ಆದರೆ ಮುಖ್ಯಮಂತ್ರಿಗಳಾದ ಮೇಲೆ ಇಂತಹ ತಪ್ಪುಗಳಾಗಬಾರದು ಎನ್ನವುದನ್ನಷ್ಟೇ ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ಬಳ್ಳಾರಿಯಲ್ಲಿರತಕ್ಕಂಥ ಅಧಿಕಾರಿರಿಗಳು, ಯಾವ ಜಾತಿಯವರು ಎನ್ನುವ ಪ್ರಶ್ನೆಗೆ ನಾನು ಹೋಗುವುದಿಲ್ಲ. DC ಯಾರು? SP ಯಾರು? DFO, DCF, is purely ಯಾರು ? ಅವರ್ಯಾರು ? ಏನು ಸ್ವಾಮಿ ಇದು nexus ? ಲೋಕಾಯುಕ್ತರು ಏಕೆ ರಾಜಿನಾಮೆ ಕೊಟ್ಟರು? ನೀವು ಈ ಕೆಲಸ ಮಾಡುತ್ತೀರೆಂದು ರಾಜೀನಾಮೆ ಕೊಟ್ಟರು. ಈಗಲೂ ತೊಂದರೆ ಇಲ್ಲ. ನಾನು ಏಕೆ ಈ ವಿಷಯ ಹೇಳಿದೆನೆಂದರೆ, ಮುತ್ತಯ್ಯ ಎನ್ನುವವರು ಇದ್ದಾರೆ ಅವರು DCF ನಮ್ಮ ಕ್ಷೇತ್ರದಲ್ಲಿ ಗೋಪಾಲ ಕೃಷ್ಣ ಎಂಬುವವರು ಎಂ.ಎಲ್.ಎ. ಅವರು ಇವತ್ತು ಬಂದಿಲ್ಲ. ಗೋಪಾಲ ಕೃಷ್ಣ ಅವರ ಎದುರಿಗೆ contest ಮಾಡಿದಂಥ ಒಬ್ಬ ಬಿ.ಜೆ.ಪಿ. ತಿಪ್ಪೇಸ್ವಾಮಿ ಎನ್ನುವವರ brother ಅವರನ್ನು ತಂದು ಅಲ್ಲಿ ಹಾಕುತ್ತಿದ್ದಾರೆ. ಇನ್ನೊಬ್ಬ brother ಅನ್ನು ಅಲ್ಲಿ E.O. ಆಗಿ ತಂದು ಹಾಕಿಸುತ್ತಿದ್ದಾರೆ. ಒಬ್ಬ ಎಂ.ಎಲ್.ಎ. ಆದವರು ಹೇಗೆ ಕೆಲಸ ಮಾಡಬೇಕು? ಒಬ್ಬ DCF ಆದವರು 80% ರಷ್ಟು ಅರಣ್ಯಪ್ರದೇಶದಲ್ಲಿ ಅಗತಕ್ಕಂಥ ಎಲ್ಲಾ commissions and omissions ಗೆ ಜವಾಬ್ದಾರಿಯಾಗುತ್ತಾರೋ ಅಂತಹ ಅಧಿಕಾರಿ ಇವತ್ತು ಕೂರುತ್ತಾರೆ. ಅವರಿಗೆ early ಆಗಿ ಇದ್ದಂಥ ಒಬ್ಬರು ತಿಂಗಳಿಗೆ ೨೦–೩೦ ಕೋಟಿ ರಾಯಲ್ಟಿ ವಸೂಲಿ ಮಾಡುತ್ತಿದ್ದರು. ಈ ಪುಣ್ಯಾತ್ಮ ೨೦ ಲಕ್ಷವನ್ನು ಕೂಡ ವಸೂಲಿ ಮಾಡಲು ಆಗಲಿಲ್ಲ ೧೦೦ ಕೋಟಿಗೆ ನೋಟಿಸ್ ಕೊಟ್ಟಿದ್ದಾರೆ. ಆದರೆ ಒಂದು ರೂಪಾಯಿ ವಸೂಲಿ ಮಾಡಲಿಲ್ಲ. ಜಾತಿ ಎನ್ನುವುದು ಇದೆಯಲ್ಲಾ ಅದು ಎಲ್ಲರನ್ನೂ ಕೆಡಿಸಿದೆ. ಎಲ್ಲರೂ ಕೆಟ್ಟು ಹೋಗಲಿ, ರಾಜಕೀಯ, ರಾಜಕಾರಣ ಕೆಡಿಸಿಕೊಂಡು ಹೋಗಲಿ ಆದರೆ ದೇಶ ಕೆಡಿಸಬಾರದು. ಈ ವ್ಯಾಮೋಹದಿಂದ ರಾಜಕಾರಣಿಗಳು ಹೊರಗೆ ಬರಬೇಕು. ಅದು ಯಾರೇ ಆಗಿರಲಿ, ೬ ಕೋಟಿ ಜನರ ಪ್ರತಿನಿಧಿಯಾಗಿ ಒಬ್ಬರು ಮುಖ್ಯಮಂತ್ರಿಯವರು Executive Head ಅವರಿಗೆ ಎಲ್ಲಾ ಅಧಿಕಾರ ಇರುತ್ತದೆ. 15 ದಿವಸ ಒಂದು ತಿಂಗಳಿನಲ್ಲಿ ಒಬ್ಬ ಅಧಿಕಾರಿ ಇರುವುದಿಲ್ಲ, ಆಗಲೇ ವರ್ಗಾವಣೆಯಾಗಿ ಬರುತ್ತಾರೆಂದರೆ, ಇದರಲ್ಲಿ ಏನಾದರು ಸೂಪರ್ ಪವರ್, ಒಬ್ಬ Super Chief Minister ಎಂಬ position ನ್ನು ಇಟ್ಟುಕೊಂಡಿದ್ದೀರೋ ಏನು ಕತೆಯೋ ಗೊತ್ತಿಲ್ಲ.ಬಹುಶಃ ಅದು ಇದ್ದರೂ ಇರಬಹುದು. ಏಕೆಂದರೆ ಕೋರ್ ಕಮಿಟಿ

ಬೇರೆ ಇದೆ. ಅದರಲ್ಲಿ ಎನಾದರೂ ಕುಳಿತು ಚರ್ಚೆ ಮಾಡಿರಬಹುದು. ಲೋಕಾಯುಕ್ತರೇ ಅಪ್ಪಾ ಎಂದು ಹೇಳಿದಮೇಲೆ, ಬಿಜೆಪಿ ಅಧ್ಯಕ್ಷರೇ ನೇರವಾಗಿ ಅವರ ಹತ್ತಿರ ಹೋಗಿರಬೇಕಾದರೆ ಅವರ ಎದುರಿಗೇ ಅಪ್ಪಾ ಎಂದು ಸಂಭೋದನೆ ಮಾಡಬೇಕಾದರೆ ಗಡ್ಕರಿಯವರು ಅವರ ಚಿಕ್ಕಪ್ಪನೊ ಏನು ಕತೆಯೋ ಇರಬೇಕು. ಅದು ಏನಾದರೂ ಆಗಲಿ, ಆ ಪ್ರಶ್ನೆ ಬೇರೆ, ಅಂದರೆ ರಾಜಕೀಯ ಪ್ರಭಾವ ಎಲ್ಲೋ ಒಂದು ಕಡೆ ನಮ್ಮ ಆಡಳಿತ ಯಂತ್ರವನ್ನು ಯಾವ ರೀತಿಯಾಗಿ ಸಡಿಲಗೊಳಿಸುತ್ತಿದೆ ಎಂಬುದು important. That is important. That is relevant for discussion on the floor of the House. I am not worried about other things. ನುನು ಯಾರನ್ನೂ ಆರೋಪಿಸಿ ಮಾತನಾಡುತ್ತಿಲ. ನಾನು ಹೇಳುತ್ತೇನೆ. I have got greatest respect for Janardana Reddy because he is an entrepreneur. ಇವತ್ತು GIM ಸಮಾವೇಶವಾದಾಗ ಬಹಳ ಸಂತೊಷವಾಯಿತು. ಲಕ್ಷ್ಮಿಮಿತ್ತಲ್ world renowned famous in 67 Countries having business, fifth richest man in the world ಅವರಿಗಿಂಥಾ ದೊಡ್ಡ ಅಗ್ರಿಮೆಂಟನ್ನು 36 ಸಾವಿರ ಕೋಟಿಗೆ ಬ್ರಾಹ್ಮಿಣಿ industries ಎಂದು ಮಾಡಿದಾಗ I am proud that there is Aman born in Karnataka who is the Minister. He is an entrepreneur. Yes I admit. ಅವರು 36 ಸಾವಿರ ಕೋಟಿ ಮೊತ್ತದ ಕೈಗಾರಿಕೆ ಸ್ಥಾಪನೆ ಮಾಡುತ್ತಾರೆಂದು ಹೇಳಿದಾಗ ಸಂತೋಷ ಪಟ್ಟವನ್ನು ನಾನು. ರಾಜಕೀಯದಲ್ಲಿ ನಮ್ಮ ಪಕ್ಷಗಳು ಏನೇ ಇದ್ದರೂ ಕೂಡ ಎಲ್ಲೋ ಒಂದು ಕಡೆ ಒಟ್ಟಾರೆ ನಮ್ಮ ತೀರ್ಮಾನ ಏನೆಂದರೆ ನಾವುಗಳು ರಾಜ್ಯಕ್ಕೆ ಬದ್ಧರಾಗಿರಬೇಕು. ಮಲ್ಯರವರು ರಾಜ್ಯಸಬಗೆ ಆಯ್ಕೆಯಾದ ಸಂದರ್ಭದಲ್ಲಿ ನಾಣು ಬಹಳ ಸಂತೋಷೆ ಪಟ್ಟೆ, ಬಿಜೆಪಿ ಮತ್ತು ಜೆಡಿಎಸ್ ಸೇರಿ ಅವರಿಗೆ support ಮಾಡಿದರೂ ನಾನು ಬಹಳ ಸಂತೋಷ ಪಟ್ಟೆ ಏಕೆಂದರೆ ಕರ್ನಾಟಕದ ನೆಲದಲ್ಲೇ ಮೂಡಿ ಬಂದಂಥ ಒಬ್ಬ ಪ್ರತಿಷ್ಠಿತ ಉದ್ಯಮಿ ಇಡೀ ದೇಶದಲ್ಲೇ ಪ್ರಖ್ಯಾತಿಯಾಗಿರುವ ಉದ್ಯಮಿ ರಾಜ್ಯ ಸಭೆಗೆ ಬಂದರು ಎಂಬ ಆತ್ಮ ಸಂತೋಷ ನನಗಿದೆ. ನಮ್ಮ ರಾಜಕೀಯ ಪ್ರಶ್ನೆ ಬೇರೆ. ಅಂಥವರು ಒಬ್ಬರು ಇದ್ದಾಗ, ಬಿಜೆಪಿಯ ಆಯನೂರು ಮಂಜುನಾಥ್, ವೆಂಕಯ್ಯನಾಯ್ಡು, ಮಲ್ಯರವರು ಬಂದಾಗ ನನಗೆ ವೆಂಕಯ್ಯನಾಯ್ಡು ರವರಿಗಿಂಥಾ ಹೆಚ್ಚಿನ ಮೆರಿಟ್ ಇರತಕ್ಕದ್ದು ಮಲ್ಯರವರಿಗೆ ಏಂದು ತೀರ್ಮಾನ ಮಾಡಿದ್ದೆ. ಆದ್ದರಿಂದ ಒಬ್ಬ entrepreneur ನಮ್ಮವರು ಬಂದರೆ, ಒಬ್ಬ politician. I want to differentiate between politician and entrepreneur. ಒಬ್ಬ politician ಅದವನು ಒಂದು ನೀತಿಯನ್ನು ಮಾಡುತ್ತಾನೆ, ಆ

ನೀತಿ ಎಷ್ಟರಮಟ್ಟಿಗೆ ಅನುಷ್ಠಾನವಾಗುತ್ತದೊ (ಇಲ್ಲವೋ ಗೊತ್ತಿಲ್ಲ. ಅನುಷ್ಠಾನ ಮಾಡತಕ್ಕವರು ಅಧಿಕಾರಿಗಳು, ಈ ವಿಧಾನಸಭೆ ಎಲ್ಲವೂ ಬರುತ್ತವೆ. ಅದರೆ ಒಬ್ಬ entrepreneur ಅದವನು ಇವತ್ತು ನಿಜವಾಗಿಯೂ ದೊಡ್ಡ ದೇಶಪ್ರೇಮವನ್ನು ಮಾಡಬಲ್ಲ. ಎನ್ನತಕ್ಕದ್ದು. ಇವತ್ತು ನಾರಾಯಣ ಮೂರ್ತಿಯವರು ಏನು ? Sri Narayan Murthy came from the scratch but for his research mind and his capability, capacity , he is able to convince even Bill Gates to the world community and the comany has come up 10 ಲಕ್ಷ ಜನ ನೌಕರರು ಇವತ್ತು ನಾರಾಯಣ ಮೂರ್ತಿಯವರ ಹತ್ತಿರ ಇದ್ದಾರೆ. ಕರ್ನಾಟಕ ಸರ್ಕಾರದ ಬಜೆಟ್ 65 ಸಾವಿರ ಕೊಟಿ. ಈ 65 ಸಾವಿರ ಕೋಟಿಯಲ್ಲಿ ನಾವು ಉದ್ಯೋಗ ಕೊಟ್ಟಿರುವುದು ಆರೂಮುಕ್ಕಾಲು ಲಕ್ಷ ಆದರೆ ಅವರು ಕೊಟ್ಟಿರುವ ನೌಕರಿ ಹತ್ತು ಲಕ್ಷ. Who is God? should we not encourage? should we not be proud of our entrepreneuers ? ಹಾಗೆಯೇ ವಿಪ್ರೊ. ಅಜೀಮ್ ಪ್ರೇಮ್‌ಜಿಯವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ಕೊಟ್ಟಿದ್ದೇವೆ. ಏಕೆ? 13 ಸಾವಿರ ಜನ ನೌಕರರು ಇರತಕ್ಕದ್ದು. He is also one of the..... ಪ್ರಪಂಚದಲ್ಲಿ ಎಣೀಸುವಂಥ ರೀತಿಯಲ್ಲಿ ಇರತಕ್ಕವರು ವಿಪ್ರೋ ಕಂಪನಿಯ ಅಜೀಮ್ ಪ್ರೇಮ್‌ಜೀಯವರು. ಹಾಗಾಗಿ entrepreneuers ನ್ನು ಕೂಡ ನಾವು encourage ಮಾಡಬೇಕಾಗುತ್ತದೆ. ಆದರೆ, ಎಲ್ಲೋ ಒಂದು ಕಡೆಗೆ ಬ್ರಾಹ್ಮಿಣಿ ಸ್ಟೀಲ್ ಇಂಡಸ್ಟ್ರೀಸ್ entrepreneuers ಆಯಿತಲ್ಲಾ, 36 ಸಾವಿರ ಕೋಟಿ ಹಣವನ್ನು invest ಮಾಡುವ ಮಟ್ಟಕ್ಕೆ ಇವತ್ತು ಬಂದಿತಲ್ಲಾ, ಆದರೆ, ಒಂದು ಏನೆಂದರೆ, ಇವತ್ತು 36 ಸಾವಿರ ಕೋಟಿ invest ಮಾಡಬೇಕಾದಾಗ ಅದರ ಪ್ರಮೋಟರ್ಸ್ contribution ಎಷ್ಟು ಇರುತ್ತದೆ? 1/3 ಭಾಗ 1/3 ಎಂದರೆ 12 ಸಾವಿರ ಕೋಟಿ ರೂಪಾಯಿ ಇದೆಯೆಂದು ಅರ್ಥತಾನೆ ? ಏಕೆಂದರೆ ಮುಖ್ಯಮಂತ್ರಿಗಳ ಎದುರಿಗೆ Memorandum of Understanding ಸಹಿಯಾಗುತ್ತದೆ. ಅದನ್ನು ಕೊಡುವವರೊಬ್ಬರು ತೆಗೆದುಕೊಳ್ಳುವವರೊಬ್ಬರು. ಸಹಿ ಆಯಿತು. ನಾನು ಆ GIM ನ ವಿಚಾರ ಬಂದಾಗ ಇವೆಲ್ಲವನ್ನು ಪ್ರಸ್ತಾಪ ಮಾಡುತ್ತೇನೆ. Memorandum of Understanding between the Government of karnataka and the Brahmini Steel Industries. Yes, I am hopeful that Government is fully convinced that the promoters contribution has come and he has established. ಆ ಕಂಪನಿ 12 ಸಾವಿರ ಕೋಟಿ ಬಂಡವಾಳವನ್ನು ಹಾಕಿ ಬರುವುದಾದರೆ ನನ್ನ ಸ್ವಾಗತ ಇದೆ. ಆದರೆ, the promoters behind it. ಅಧ್ಯಕ್ಷರೆ ನಿಮಗೆ ಸಾಲ ಮಾಡಿ ಅಭ್ಯಾಸ ಇಲ್ಲವೆಂದು

ಕಾಣುತ್ತದೆ. ಸಾಲಕ್ಕೆ ಹೋದಾಗ ಏನು ಎಂದು ಹೇಳುತ್ತಾರೆ. promoters contribution ಎಷ್ಟು? Background of the promoters ಏನು. Background of the promoters ಎಂದು ಬಂದಾಗ ನಾನು ಎಲ್ಲಿ ಹುಟ್ಟಿದ್ದೆ, ಎಲ್ಲಿ ಬೆಳೆದೆ, ಎಷ್ಟು ಆಸ್ತಿ ಇತ್ತು ಎಷ್ಟು ಹಣ ಬರುತ್ತದೆ. ಎಂದು ಎಲ್ಲಾ ಅಂಕಿಅಂಶವನ್ನು ಕೊಡಬೇಕು. Promoters Contribution 12 ಸಾವಿರ ಕೋಟಿಯ ಜೊತೆಗೆ ಅವರ ಇತಿಯಾಸ ಏನು ಎಂದು ಸಹ ಹೇಳಬೇಕಾಗುತ್ತದೆ. ಅದನ್ನು ಹೇಳಿದಾಗಲೇ ಇವತ್ತು ಕಂಪನಿಗಳು ಜಾರಿಗೆ ಬರುವುದು. ನಾನು ಮತ್ತೆ ಮತ್ತೆ ಮಾತನ್ನು ಬೆಳೆಸಲು ಇಷ್ಟಪಡುವುದಿಲ್ಲ. ಕಾಲಾವಕಾಶ ಜಾಸ್ತಿಯಾಗುತ್ತದೆ. ಪತ್ರಿಕೆಯಲ್ಲಿ ಏನೇನು captions ಬಂದಿದೆ ಅದನ್ನು ಮಾತ್ರ ಓದಿ ಹೇಳಿದ್ದೇನೆ. ಲೋಕಾಯುಕ್ತರು ಇದನ್ನೇ ಧ್ವನಿಗೂಡಿಸಿರತಕ್ಕದ್ದು. ಅಫರು ಇನ್ನು ಏನನ್ನೂ ಹೇಳಲು ಆಗಿಲ್ಲ. ಬಹಳ ಮುಖ್ಯವಾಗಿರುವುದೇನೆಂದರೆ, ಎಲ್ಲರೂ ಕಾಮೆಂಟ್ ಮಾಡುತ್ತಾರೆ. Toothless regulators loop holes in law, unreformed mining sector, it is Mafia's club. ನಾವು ಕುಳಿತಿರುವುದು ಏಕೆ? ಕಾನೂನು ಮಾಡಲು ಅಲ್ಲವೇ? ನಾವು ಕಾನೂನು ಮಾಡುವುದನ್ನು ಬಿಟ್ಟು ಸುಮ್ಮನೆ ಮಾತನಾಡಿಕೊಂಡು ಕುಳಿತರೆ ಏನು ಪ್ರಯೋಜನ? ಕಾನೂನು ಮಾಡಲು ಸರ್ಕಾರ ಮುಂದೆ ಬರಬೇಕು. ನೀವು ಕಾನೂನನ್ನು ತನ್ನಿ, economy, finance ವಿಚಾರದಲ್ಲಿ ನಮ್ಮ ವಿರೋಧ ಪಕ್ಷ ಯಾವಾಗಲೂ ನಿಮಗೆ ಸಪೋರ್ಟ್ ಮಾಡುತ್ತದೆ. ಪ್ರಗತಿಪರವಾದ ಚಿಂತನ ಇರುವುದಕ್ಕೆ ಎಂದೂ ಕೂಡ ನಾವು ನಿಮಗೆ ಸಪೋರ್ಟ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾಗಿ, ನಾನು ಒಂದು ಪತ್ರಿಕೆಯನ್ನು ನೋಡಿದೆ. ಏಕೆಂದರೆ it is an All India matter. It is my duty, as a member Iam raising it. ಅದನ್ನು ಯಾರು ಇವತ್ತು national issue ಆಗಿರುವ ವಿಚಾರವನ್ನು ರಾಜ್ಯದ ಪ್ರತಿಷ್ಠೆ, ರಾಜ್ಯದ ಬಗ್ಗೆ ಜನರು ನೋಡಿದಂಥ ಸಂದರ್ಭದಲ್ಲಿ ಅನುಮಾನ ಬರಬಾರದು. ಆ ಕಾರಣಕ್ಕಾಗಿ ಕೆಲವು ವಿಚಾರಗಳನ್ನು ಹೇಳುತ್ತೇನೆ. This scale of corruption in mining is a National calamity. No one optimises this better than the media kidnapping political cloud, muscle power these are all the captions. ನಾನು ಅದನ್ನು ಸಂಪೂರ್ಣವಾಗಿ ಓದುವುದಕ್ಕೆ ಸಮಯ ಹಿಡಿಯುತ್ತದೆ. ಮಾನ್ಯ ಜನಾರ್ಧನ ರೆಡ್ಡಿಯವರು ಹೇಳಿದ ಹಾಗೆ, ನಾಲ್ಕು ದಿವಸ ಟೈಮ್ ಕೊಟ್ಟರೆ ಖಂಡಿತವಾಗಿಯೂ ಅದನ್ನು ಹೇಳಲಿಕ್ಕೆ ನಾನು ಸಮರ್ಥನಾಗಿದ್ದೇನೆ ಮತ್ತು ತಯಾರಾಗಿದ್ದೇನೆ. Mine at legal place, Bellary has enough iron ore to last 30 years. But it is likely to be in ravage in just six years. This is the

study report independent study report.. ಏಕೆ ಇದನ್ನೆಲ್ಲಾ ತೆಗೆಸಿದರು ಎಂದರೆ, ಬೀಜಿಂಗ್‌ನಲ್ಲಿ ಒಲಿಂಪಿಕ್ಸ್ ಗೇಮ್ಸ್ ನಡೆಸುವ ಹೆನ್ನೆಲೆಯಲ್ಲಿ ಇಡೀ ಚೈನಾ ದೇಶದಲ್ಲಿ ಅವರು ಮಾಡಿರತಕ್ಕಂಥ ಮೂಲಭೂತ ಸೌಕರ್ಯ ಇದೆಯಲ್ಲಾ ಬಹುಶಃ ಇಡೀ ಪ್ರಪಂಚದವರು ಮೆಚ್ಚುವಂತಹ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ಹಾಗಾಗಿ ಅವರಿಗೆ steel ಬೇಕು, ಅವರ domestic consumption ಗೋಸ್ಕರ ನಮ್ಮ mines ಅನ್ನು ತರಿಸಿಕೊಳ್ಳುತ್ತಿದ್ದಾರೆ. ಅಂದರೆ ನಮ್ಮ mines ಅನ್ನು ಯಾವ ರೀತಿಯಲ್ಲಿ ತರಿಸಿಕೊಳ್ಳುತ್ತಾರೆ, ಹೇಗೆ ಮಾಡುತ್ತಾರೆ? ಎನ್ನುವ ಪ್ರಶ್ನೆ ಬೇರೆ. ಇಷ್ಟಾದರೂ ಕೂಡ, ನಮಗೆ ಅಬ್ಬಬ್ಬಾ ಎನಿಸುತ್ತದೆ, ಆದರೆ ಅದರ ಬೆಲೆ ಅವರಿಗೆ ಗೊತ್ತು. ಇವತ್ತು ಒಂದು ಟನ್‌ಗೆ 7 ಸಾವಿರ ರೂ. ಗಳು ಸಿಗುತ್ತದೆ ಎಂದು ಹೇಳುತ್ತೇವೆ. ಸರ್ಕಾರಕ್ಕೆ 22 ರೂ. ಗಳಂತೆ ಆದರೂ ಕೂಡ ಬಹಳ ದೊಡ್ಡ amount ಸಿಗುತ್ತದೆ. ಆದರೆ ಅದರ value. ಎಷ್ಟು ಎನ್ನುವುದು ಅದನ್ನು ಕಳೆದುಕೊಂಡ ಮೇಲೆ ಗೊತ್ತಾಗುತ್ತದೆ. ಕಳೆದುಕೊಳ್ಳುವವರೆಗೂ ನಮಗೆ ಅದರ ಬೆಲೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು: ನಿಮಗೆ ಇನ್ನೂ ಎಷ್ಟು ಹೊತ್ತು ಬೇಕು?

ಶ್ರೀ ಟಿ.ಬಿ. ಜಯಚಂದ್ರ ನಾನು ಬೇಗನೆ ಮುಗಿಸುತ್ತೇನೆ. ನೀವು ಊಟಕ್ಕಾಗಿ ಸದನ ಮುಂದೂಡುವುದಕ್ಕೆ ನಾನೇನೂ ಅಡ್ಡ ಬರುವುದಿಲ್ಲ. Most mines owners have their private army guards, ಏನು ಅಧ್ಯಕ್ಷರೇ ಇದು? Armed with SLR's even official fear entering the sites. ಏನು ಇದೆಲ್ಲಾ ? ಏನು ಪ್ಯಾರಲಲ್ ಗೌರ್ಮೆಂಟೇ? ನನಗೆ ಅರ್ಥವೇ ಆಗುವುದಿಲ್ಲ. Young men between 15-25 stopped studying, they have been given bikes, phones and made to spy. ಮಾನ್ಯ ಸಿದ್ದರಾಮಯ್ಯನವರು ಸಂಡೂರಿಗೆ ಹೋಗಿದ್ದರಂತೆ. ಅವರು ಅಲ್ಲಿಗೆ ಹೋಗಿದ್ದಾಗ 30 ಮೋಟಾರ್ ಸೈಕಲ್‌ಗಳು ಬಂದವು ಎಂದು ಅವರು ಹೇಳಿದರು. ಎಲ್ಲಿ ಹೊಡೆದು ಬಿಡುತ್ತಾರೋ ಎಂದು ಹೆದರಿಕೆ ಆಗುತ್ತಿತ್ತು. ಆ ಮಟ್ಟಕ್ಕೆ ಅವರು ವೇಗದಿಂದ ಬರುತ್ತಿದ್ದರು ಎಂದು ಅವರು ಹೇಳಿದರು.

ಶ್ರೀ ಸಿದ್ದು ಸವದಿ : 30 ಜನ ಮೋಟಾರ್ ಬೈಕ್‌ಗಳಲ್ಲಿ ಬಂದವರು ಮಾನ್ಯ ಸಿದ್ದರಾಮಯ್ಯನವರ ಅಭಿಮಾನಿಗಳೇ ಹೊರತು ಬೇರೆ ಯಾರೂ ಅಲ್ಲ.

(ಗೊಂದಲ)

ಶ್ರೀ ಕೆ. ನೇಮಿರಾಜ್ ನಾಯ್ಕ್ :- ...... ಈ ವಿಷಯ ಬಿಟ್ಟು ಹೇಳಲಿಕ್ಕೆ ಅವರ ಹತ್ತಿರ ಬೇರೆ ವಿಷಯ ಏನೂ ಇಲ್ಲ. ತಿರುಗ-ಮುರುಗ, ಹಿಂದೆ-ಮುಂದೆ ಮತ್ತೆ ಮತ್ತೆ ಅದನ್ನೇ

ಹೇಳುತ್ತಿದ್ದಾರೆ. ಇನ್ನು ಒಂದು ತಿಂಗಳ ಕಾಲಾವಕಾಶ ಕೊಟ್ಟರೂ ಮತ್ತೆ ಮತ್ತೆ ಅದನ್ನೇ ಹೇಳುತ್ತಿರುತ್ತಾರೆ, ಅದನ್ನು ಬಿಟ್ಟು ಹೇಳಲಿಕ್ಕೆ ಅವರ ಹತ್ತಿರ ಬೇರೆ ವಿಷಯವೇ ಇಲ್ಲ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಸಿದ್ದು ಸವದಿಯವರು ಆಗ ಹೈದರಾಬಾದ್‌ನಲ್ಲಿ ಏಕೆ ಇದ್ದರು ? ಆಗ ಅವರು ಯಾರ ಅಭಿಮಾನಿಗಳಾಗಿದ್ದರು?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಯಾರ ವಿಷಯಾಂತರ ಮಾಡುವುದು ಬೇಡ, ಮಾನ್ಯ ಜಯಚಂದ್ರರವರೆ, ತಾವು ಯಾರಿಗೂ ಯೀಲ್ಡ್ ಆಗದೆ, ಮಾತನಾಡುವುದನ್ನು ಮುಂದುವರೆಸಿ.

(ಗೊಂದಲ)

ಶ್ರೀ ಹೆಚ್.ಸಿ. ಮಹದೇವಪ್ಪ.: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಮಾನ್ಯ ಸಿದ್ದರಾಮಯ್ಯನವರು ಅಲ್ಲಿಗೆ ಹೋಗಿದ್ದಾಗ, ಅಲ್ಲಿ ಕೆಲವು ಯುವಕರು ಯಾವ ರೀತಿಯಲ್ಲಿ ಮೋಟಾರ್ ಬೈಕ್‌ನಲ್ಲಿ ಬಂದು ತಡೆ ಹಾಕಿದರು ಎಂದು ಹೇಳಿದರು. ಸ್ವತಃ ಲೋಕಾಯುಕ್ತರೇ....

ಅಧ್ಯಕ್ಷರು : ವಿಷಯಾಂತರ ಬೇಡ.

ಶ್ರೀ ಹೆಚ್.ಸಿ. ಮಹದೇವಪ್ಪ: ಸ್ವತಃ ಲೋಕಾಯುಕ್ತರೇ ಯಾವ ರೀತಿಯಲ್ಲಿ ಅಲ್ಲಿಯ ಯುವಜನರು ದಾರಿ ತಪ್ಪುತ್ತಿದ್ದಾರೆ ಎಂಬುದನ್ನು ಹೇಳಿದ್ದಾರೆ. ಯುವಜನರು ಶಾಲಾ ಕಾಲೇಜುಗಳನ್ನು ಬಿಟ್ಟು ಮೊಬೈಲ್ ಹಿಡಿದುಕೊಂಡು ಬೈಕ್‌ನಲ್ಲಿ ತಿರುಗಾಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆ ಕೃಷ್ಣದೇವರಾಯರು ಆಡಳಿತ ನಡೆಸಿದಂತಹ ಜಿಲ್ಲೆ, ವಜ್ರ ವೈಡೂರ್ಯಗಳನ್ನು ಮೊರದಲ್ಲಿ ದಾನ ಮಾಡುತ್ತಿದ್ದಂತಹ ಜಿಲ್ಲೆ ಅಲ್ಲಿ SC/ST, backward & minority ಗೆ ಸೇರಿದ ಲಕ್ಷಾಂತರ ಜನರಿದ್ದಾರೆ. ಅಂತಹ ಜಿಲ್ಲೆಯಲ್ಲಿ ಯುವಶಕ್ತಿಯನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ಇವತ್ತೇನು ದೇಶದಲ್ಲಿ ನಕ್ಸಲಿಸಂ ಬಗ್ಗೆ ಹೋರಾಟ ನಡೆಯುತ್ತಿದೆ, ಮಾವೋವಾದಿಗಳ ಹೋರಾಟ ನಡೆಯುತ್ತಿದೆ, ಅಂತಹ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗುವುದಕ್ಕೆ ರಾಜಕೀಯ ವ್ಯವಸ್ಥೆ ಅವಕಾಶ ಕೊಡಬಾರದು. Whether it is Siddaramaiah or somebody else. This is serious matter of concern. How you are misleading the younger generation ? Lokayuktha himself pointed out this when he visited.

(ಗೊಂದಲ)

ಅಧ್ಯಕ್ಷರು : ವಿಷಯಾಂತರ ಮಾಡುವುದು ಬೇಡ. ಅವರು ಮಾತನಾಡಿ ಮುಗಿಸಲಿ.

(ಗೊಂದಲ)

ಅಧ್ಯಕ್ಷರು : ಅದೆಲ್ಲಾ ದಾಖಲೆಗೆ ಹೋಗಬಾರದು. ದಯವಿಟ್ಟು ಅದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ. ಅವರು ಏನು ಬೇಕಾದರೂ ಮಾತನಾಡಿಕೊಳ್ಳಲಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ನಾನು ಮರೆತು ಬಿಟ್ಟಿದ್ದೆ. ಇತ್ತೀಚೆಗೆ ಮಾನ್ಯ ಕೃಷ್ಣದೇವರಾಯ ಪಟ್ಟಾಭಿಷೇಕಗೊಂಡು 500 ವರ್ಷಗಳಾದ ಪ್ರಯುಕ್ತ ಸಂಭ್ರಮಾಚರಣೆಗಳು ನಡೆದವು. ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ. ಆಂಧ್ರ ಪ್ರದೇಶದಲ್ಲೂ ಸಹ ಸಂಭ್ರಮಾಚರಣೆಗಳು ನಡೆಯುತ್ತಿವೆ. ಮಾನ್ಯ ರಾಷ್ಟ್ರಪತಿಗಳೂ ಸಹ ಆಗಮಿಸಿ ಸದರಿ ಸಮಾರಂಭದಲ್ಲಿ ಭಾಗವಹಿಸಿದ್ದಾರೆ. ಕೃಷ್ಣದೇವರಾಯನನ್ನು ನಾವು ಮೆಚ್ಚಬೇಕು. ಅವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ಏಕೆಂದರೆ, ಅವರ ಕಾಲದಲ್ಲಿ ರತ್ನ, ವಜ್ರ, ವೈಡೂರ್ಯಗಳೆಲ್ಲವೂ ಕೂಡ ಬೀದಿಯಲ್ಲಿ ಚೆಲ್ಲುತ್ತಿತ್ತು. ಚೈನಾದಿಂದ ಬಂದಂತಹ ಹೂಯೆನ್-ತ್ಸಾಂಗ್ ಎಂಬುವವನು 'ಎಂತಹ ಸಮೃದ್ಧಿಯಾದಂತಹ ದೇಶ, ಎಂತಹ ಒಬ್ಬ ರಾಜ ಈ ಪ್ರಪಂಚದಲ್ಲಿ ಹುಟ್ಟಿದ್ದಾನೆ' ಎಂದೆಲ್ಲಾ ಆ ಬಗ್ಗೆ ಹಾಡಿ ಹೊಗಳಿದ್ದಾನೆ. ಈ ಮನುಷ್ಯ ಜನ್ಮಕ್ಕೆ ಪುನರ್ಜನ್ಮ ಇದೆ ಎಂದು ನಾನು ಭಾವಿಸಿದ್ದೇನೆ. ಕೃಷ್ಣದೇವರಾಯರು ಎಲ್ಲೋ ಒಂದು ರೂಪದಲ್ಲಿ ಮತ್ತೆ ಜನ್ಮ ತಳೆದಿರಬಹುದು ಅಥವಾ ಕೃಷ್ಣದೇವರಾಯನ ಗುಣ ಇರತಕ್ಕವರು ಯಾರಾದರೊಬ್ಬರು ಪುನಃ ಭೂಮಿ ಮೇಲೆ ಅವತರಿಸಬಹುದು. ಅದು ಬಳ್ಳಾರಿಯಲ್ಲೇ ಆಗಬೇಕೆಂದೇನೂ ಇಲ್ಲ, ಅದು ಎಲ್ಲಿ ಬೇಕಾದರೂ ಅಗಬಹುದು. ಒಬ್ಬ ವ್ಯಕ್ತಿ ಎಷ್ಟೊಂದು ಸಂಪಾದನೆ ಮಾಡಬಲ್ಲ ಎಂದರೆ, ಅಧಿಕೃತ ಮಾಹಿತಿ ಪ್ರಕಾರ 27 ರೂ. ಗಳನ್ನು ಸರ್ಕಾರಕ್ಕೆ ಕೊಟ್ಟು, 7 ಸಾವಿರ ರೂ.ಗಳ ಬೆಲೆ ತೆಗೆದುಕೊಂಡು ದಿನಕ್ಕೆ 20-25 ಕೋಟಿ ರೂ. ಗಳವರೆಗೆ ಸಂಪಾದಿಸಬಹುದು. ಮಾನ್ಯ ಅಧ್ಯಕ್ಷರೇ, ನಾನು ಕೊನೆಯದಾಗಿ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಇವತ್ತು ಅಕ್ರಮವಾಗಿಯೋ ಅಥವಾ ಇನ್ಯಾವುದೋ ರೀತಿಯಲ್ಲಿ ಹೊರಗೆ ಹೋಗುತ್ತಿದೆ. ನೀವು ಅದನ್ನು ಕಂಡು ಹಿಡಿಯಲಿಕ್ಕೆ ಸಾಧ್ಯವಿಲ್ಲವೇ? ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಇವತ್ತೊಂದು assessment ಮಾಡಿಸಿ. ಇಂಥಿಂಥ ಏರಿಯಾದಲ್ಲಿ ಮೈನಿಂಗ್‌ಗೆ ಯಾರ್ಯಾರಿಗೆ ಲೀಸ್ ಗೆ ಕೊಡಲಾಗಿದೆ? ಯಾರ್ಯಾರ ಲೀಸ್‌ನಲ್ಲಿ ಎಷ್ಟೆಷ್ಟು ಮೈನಿಂಗ್ ಓರ್ಸ್ ಹೊರಗಡೆ ಹೋಗಿದೆ? ಯಾರ್ಯಾರು ಅದನ್ನು ಹೊರಗೆ ಕಳುಹಿಸಿದ್ದಾರೆ ಎನ್ನುವ ಮಾಹಿತಿಯೆಲ್ಲವೂ ಸಿಗುತ್ತದೆ. ಅದರ ಜೊತೆಗೆ, ಮೈನಿಂಗ್‌ಗಾಗಿ ಲೀಸ್ ಮೇಲೆ ಏನು ಕೊಡಲಾಗಿದೆ, ಅವುಗಳು renewal ಆಗಿಲ್ಲ. ಆದಾಗ್ಯೂ ಸಹ ಅವುಗಳ ಹೆಸರಿನಲ್ಲಿ

permit issue ಆಗಿದೆ. IBM report ಪ್ರಕಾರ material ಇಲವೇ ಇಲ್ಲ. ಅದರಲ್ಲಿ permit ತೆಗೆದುಕೊಂಡಿದ್ದಾರೆ. ಅಲ್ಲಿರುವುದು ಬರೇ limestone ಆದರೆ Iron ore ಸಾಗಾಣಿಕೆಗೆ ಇವತ್ತು ಖಾಲಿ ಖಾಲಿ permit ಗಳನ್ನು ಕೊಡಲಾಗಿದೆ. ಏನು ಸ್ವಾಮಿ ಇದು? ಇದನ್ನೇ ಮಾನ್ಯ ಲೋಕಾಯುಕ್ತರು ಎರಡು ವರ್ಷಗಳ ಹಿಂದೆ ಹೇಳಿದ್ದರು. ಅವರು ಹೇಳಿ ಎರಡು ವರ್ಷಗಳಾಗಿದ್ದರೂ, ಇದುವರೆಗೂ ಈ ದಿಸೆಯಲ್ಲಿ ಏನೂ action ತೆಗೆದುಕೊಂಡಿಲ್ಲ. ಎಲ್ಲಾ ರೀತಿಯ action ತೆಗೆದುಕೊಂಡಿದ್ದೇವೆಂದು ನೀವು ಅವರಿಗೆ ಪತ್ರ ಬರೆದಿದ್ದೀರಿ. ನೀವು ಏನು action ತೆಗೆದುಕೊಂಡಿದ್ದೀರಿ? ನೀವು action ತೆಗೆದುಕೊಂಡಿದ್ದರೆ ಏಕೆ ಇದು ನಿಲ್ಲುತ್ತಿರಲಿಲ್ಲ? ಇವತ್ತು Forest ನಲ್ಲಿ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದೆ. Forest Conservation Act ನ violation ಇವತ್ತು ಆಗುತ್ತಿದೆ. ಅಲ್ಲದೆ Revenue Law violations ಸಹ ಆಗುತ್ತಿದೆ. ಆದರೆ ಏಕೆ ಇವತ್ತು ಅದರ ವಿರುದ್ಧ actions ಆಗುತ್ತಿಲ್ಲ? ಎನ್ನುವುದು ಪ್ರಾಮುಖ್ಯವಾಗಿರತಕ್ಕ ಪ್ರಶ್ನೆಯಾಗಿದೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಎಲ್ಲೋ ಒಂದು ಕಡೆ ಗೂಂಡಾಯಿಸಂ ನಡೆಯುತ್ತಿದೆ ಎನಿಸುತ್ತದೆ. ಮಾನ್ಯ ಸಿದ್ದರಾಮಯ್ಯನವರು ಹೋಗಿದ್ದಾಗ ನಡೆದ ಘಟನೆಗೆ ಸಂಬಂಧಿಸಿದಂತೆ ಗೂಂಡಾ ಆಕ್ಟ್ ಅನ್ನು invoke ಮಾಡಿ, ಯಾರು ಅವರನ್ನು ಅವತ್ತು ತಡೆದರೋ, ಅವರನ್ನು ಗೂಂಡಾ ಆಕ್ಟ್ ಅಡಿಯಲ್ಲಿ ಒಳಗೆ ಹಾಕಬೇಕಾಗಿತ್ತು. Chief Mining Officer was kidnapped to stop from going to the vessels. ಇನ್ನೊಂದು ಮಾತನ್ನು ನಾನು ಹೇಳಬಯಸುತ್ತೇನೆ ಪಾಪ. ಇದನ್ನು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆ. ಈ ಮಾಫಿಯಾ ಎಲ್ಲರ ಕಾಲದಲ್ಲೂ ಆಗಿದೆ. ಎಂದು ಹೇಳುತ್ತಾರೆ. ಆದರೆ ಈ ಸರ್ಕಾರಕ್ಕೂ ಅವರಿಗೂ ಬಹಳ ನಿಕಟವಾದ ನೆಂಟು ಇದೆ. ಏನ್ನೂ action ತೆಗೆದುಕೊಳ್ಳಲಿಲ್ಲ ಎಂಬ ಕಾರಣಕ್ಕೋಸ್ಕರ ಈ ಮಾತನ್ನು ಹೇಳಬೇಕಾಗಿದೆ.ಇಂತಹ ನೆಂಟಿಗೂ., ಮಾಫಿಯಾಕ್ಕೂ ಸಂಬಂಧ ಇರುವುದರಿಂದ ಇವತ್ತು ರಾಜ್ಯದ ಕುರ್ಚಿಯನ್ನು ಹಿಡಿಯುವುದರಲ್ಲಿ ಯಶಸ್ವಿಯಾಗುವುದರ ಜೊತೆಗೆ ರಾಷ್ಟ್ರದ ಕುರ್ಚಿಯನ್ನು ......

(ಗೊಂದಲ)

ಅಧ್ಯಕ್ಷರು : ಉತ್ತರದಲ್ಲಿ ಎಲ್ಲವನ್ನೂ ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಎಸ್. ಸೋಮಲಿಂಗಪ್ಪ : 50 ವರ್ಷಗಳಿಂದ ಮೈನಿಂಗ್ ಮಾಡಿಕೊಂಡು ಸರ್ಕಾರದಿಂದ ಮನ್ನಾ ಮಾಡಿಸಿಕೊಂಡಿದ್ದೀರಿ..

(ಗೊಂದಲ)

ಶ್ರೀ ನೇಮಿರಾಜ ನಾಯ್ಕ್ : ಇವರಿಗೆ ಇವತ್ತು ರೈತರ ಬಗ್ಗೆ ಚಿಂತೆ ಇಲ್ಲ, ಬಡಬಗ್ಗರಿಗೆ ಏನಾಗಬೇಕೆಂಬ ವಿಚಾರದ ಬಗ್ಗೆ ಚರ್ಚೆಯೇ ಇಲ್ಲ

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದೇಶಕ್ಕೆ 1947 ರಲ್ಲಿ ಸ್ವಾತಂತ್ರ್ಯ ಬಂತು ಭಷ್ಟಾಚಾರ ಈಗ ಕಣ್ಣಿಗೆ ಕಾಣುತ್ತಿದೆ, ಯಾರ ಕಾಲದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ, ಯಾರ ಕಾಲದಲ್ಲಿ ಗಣಿ ಹಗರಣವಾಗಿದ್ದು, ಇವರು ಅಧಿಕಾರದ ಕುರ್ಚಿಯಲ್ಲಿದ್ದಾಗ, ಗಣಿ ಭೂ ಮಾಫಿಯಾ, ಭ್ರಷ್ಟಾಚಾರ ಯಾವುದು ಇವರ ಕಣ್ಣಿಗೆ ಕಾಣುವುದಿಲ್ಲ, ಯಾವಾಗ ಕುರ್ಚಿಯಿಂದ ಕೆಳಗಿಳಿಯುತ್ತಾರೆ ಆಗ ಭ್ರಷ್ಟಾಚಾರ, ಗಣಿ ಬಗ್ಗೆ ಮಾತನಾಡುತ್ತಾರೆ, ಇದಕ್ಕೆ ಹೊಣೆ ಯಾರು ಸ್ವಾಮಿ? ಇದಕ್ಕೆ ಕಾರಣ ತಾವೇ. ಅದಕ್ಕೆ ಇವತ್ತು ಜನರು ನಿಮ್ಮನ್ನು ಪ್ರತಿಪಕ್ಷದ ಸ್ಥಾನದಲ್ಲಿ ಕೂರಿಸಿದ್ದಾರೆ, ಜನರು ನಿಮಗೆ ಉತ್ತರ ಕೊಟ್ಟಿದ್ದಾರೆ. ಗಣಿಯದನ್ನು ಬಿಟ್ಟು ಈ ರಾಜ್ಯದ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲಿ, ಸಾಕಷ್ಟು ಜ್ವಲಂತ ಸಮಸ್ಯೆಗಳಿವೆ, ಜನರು ನೋಡುತ್ತಿದ್ದಾರೆ, ಗಣಿ ಬಿಟ್ಟರೆ ಬೇರೆ ಏನೂ ಇಲ್ಲ ಅಧಿವೇಶನ ಪ್ರಾರಂಭವಾದರೆ ಗಣಿ ಬೇರೆ ವಿಚಾರ ಇಲ್ಲ, ಜ್ವಲಂತ ಸಮಸ್ಯೆಗಳಿವೆ ಅದರ ಬಗ್ಗೆ ಮಾತನಾಡಲಿ, ಯಾರ ಕಾಲದಲ್ಲಿ ಭ್ರಷ್ಟಾಚಾರ ಆರಂಭವಾಯಿತು, ಯಾರು ಅದಕ್ಕೆ ಕುಮ್ಮಕ್ಕು ಕೊಟ್ಟರು, ಯಾರ ಕಾಲದಲ್ಲಿ ಇದಾಯಿತೆಂಬುದೆಲ್ಲಾ ಜನರಿಗೆ ಗೊತ್ತಿದೆ, ದಯಮಾಡಿ, ಈ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಡಿ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನೇರವಾಗಿ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ, ಈ ಬಗ್ಗೆ 4 ದಿವಸ ಚರ್ಚೆ ಮಾಡಲು ಅವಕಾಶ ಕೊಟ್ಟರು ಚರ್ಚೆ ಮಾಡುವಷ್ಟು ಮೆಟೀರಿಯಲ್ ನಮ್ಮ ಹತ್ತಿರವಿದೆ, ಚರ್ಚೆ ಮಾಡುತ್ತೇವೆ, ತೊಂದರೆ ಇಲ್ಲ.. **(ಗೊಂದಲ)**

ಶ್ರೀ ಎಂ.ಎಸ್. ಸೋಮಲಿಂಗಪ್ಪ: ಈಗ 2 ವರ್ಷಗಳ ಬಗ್ಗೆ ಮಾತನಾಡುತ್ತಿದ್ದೀರಿ, 60 ವರ್ಷದ ಬಗ್ಗೆ ಚರ್ಚೆಯಾಗಲಿ.

ಶ್ರೀ ಟಿ.ಬಿ.ಜಯಚಂದ್ರ : ಅಂಗೈನಲ್ಲಿರುವ ಹುಣ್ಣನ್ನು ನೋಡುವುದಕ್ಕೆ ಕನ್ನಡಿ ಏತಕ್ಕೆ ಸ್ವಾಮಿ? ನಾವೆಲ್ಲಾ ಸೇರಿ ಷಂಕ ಜಾಗಟೆಯನ್ನು ಬಾರಿಸಿದ್ದು ಬಾರಿಸಿದ್ದೇ, ಕುಂಬಕರ್ಣ ನಿಜವಾಗಲು ನಿದ್ರೆ ಮಾಡುತ್ತಿದ್ದರೆ ಎಬ್ಬಿಸುವುದು ಕಷ್ಟವಿಲ್ಲ. ಕುಂಬಕರ್ಣನಂತೆ ನಟನೆ ಮಾಡುತ್ತಿದ್ದರೆ ಅವರನ್ನು ಎಬ್ಬಿಸುವುದು ಕಷ್ಟ, ಇದು ನಮ್ಮ ಪರಿಸ್ಥಿತಿ ಇವತ್ತು ಆಗಿರುವುದು. ದಯಮಾಡಿ, ಆ ನಿದ್ರೆಯಿಂದ ಹೊರಗೆ ಬರಬೇಕು ತುಮಕೂರು, ಚಿತ್ರದುರ್ಗ ಮತ್ತು ಇತರೆ ನಾನು ಬಳ್ಳಾರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ, ನಡೆಯುತ್ತಿದೆ ಎನ್ನುವುದು

ಇಡೀ ದೇಶಕ್ಕೆ ಗೊತ್ತಿರುವ ವಿಚಾರ. ಆದರೆ ಬಿಜೆಪಿ ನೇತೃತ್ವದ ಸರ್ಕಾರ ಜಾಣತನ, ಕಿವುಡುತನ ಪ್ರದರ್ಶಿಸುತ್ತಿದೆ ಏಕೆ? ಕೇಂದ್ರ ಸರ್ಕಾರದ ಗಣಿಸಚಿವರು, ಲೋಕಾಯುಕ್ತರು Indian Bureau of Mines ಸುರಕ್ಷತೆ ಗಣಗಾರಿಕೆಯ ನಿರ್ದೇಶಕರು, ಕಾರ್ಯಕರ್ತರು, ಪರಿಸರವಾದಿಗಳು, ಎಲ್ಲರೂ ಕೂಡ ಇವತ್ತು ಅಕ್ರಮ ಗಣಿಗಾರಿಕೆಯ ಬಗ್ಗೆ ಧ್ವನಿಗೂಡಿಸಿದ್ದಾರೆ, ಅವರೆಲ್ಲರ ಭಾವನೆಗಳನ್ನು ಇವತ್ತು ಹೇಳುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಇದರ ಜೊತೆಗೆ ನಿನ್ನೆ ನೆರೆಸಂತ್ರಸ್ಥರ ಪ್ರಶ್ನೆ ಬಂದಾಗ, ಮುಖ್ಯಮಂತ್ರಿಗಳು ಹಣಕ್ಕೋಸ್ಕರ ಬೀದಿ ಬೀದಿಗೆ ಬಂದಿದ್ದರು, ಬಹುಶಃ ಯಾವ ಮುಖ್ಯಮಂತ್ರಿಗಳು ಆ ರೀತಿ ಬರಲಿಲ್ಲ, ನನಗೆ ಬಹಳ ಮೆಚ್ಚುಗೆಯಾಯಿತು 600–700 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡುವ ಮಟ್ಟಕ್ಕೆ ಮಾಡಿದರು. ಬಹುಶಃ ಅವರು ಎಲ್ಲಾದರೂ ಯೋಚನೆ ಮಾಡಿದ್ದರೆ, ಈ ಮಾಫಿಯಾದ ಬಗ್ಗೆ ಸ್ವಲ್ಪ ಗಮನಹರಿಸಿದ್ದರೆ ಚೆನ್ನಾಗಿರುತ್ತಿತ್ತು, ಅದನ್ನು ವಸೂಲ್ಮಾಡುವ ಕೆಲಸವನ್ನು ಏತಕ್ಕೆ ಮಾಡಲಿಲ್ಲವೆನ್ನುವುದು ನನ್ನ ಪ್ರಶ್ನೆ ಮುಖ್ಯಮಂತ್ರಿಗಳು ಪವರ್ ಫುಲ್ ಅಲ್ಲವೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ, ಸಚಿವ ಸಂಪುಟಕ್ಕೆ ಯಾರನ್ನು ತೆಗೆದುಕೊಳ್ಳಬೇಕು, ಬಿಡಬೇಕೆಂಬುದು that is his discretion. It is the prerogative right of the Chief Minister to take anybody and to drop anybody from the cabinet. ಜಗದೀಶ್ ಶೆಟ್ಟರ್ ಅವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡರು, that is his prerogative ತಾವು ಮಂತ್ರಿಗಳಾಗುತ್ತಿರೆಂದು ಭಾವಿಸಿದ್ದೆ, ಜಗದೀಶ್ ಶೆಟ್ಟರ್ ಮಂತ್ರಿಗಳಾದರು, ಆದರೂ ತಾವು ಸಭಾಧ್ಯಕ್ಷರಾದಿರಿ ಪರವಾಗಿಲ್ಲ ತೊಂದರೆ ಇಲ್ಲ ಬಿಡಿ.

ಅಧ್ಯಕ್ಷರು : ತಾವು ವಿಷಯಕ್ಕೆ ಬನ್ನಿ ವಿಷಯಾಂತರ ಮಾಡುವುದು ಬೇಡ

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ರೀಲ್ ಬಿಡುತ್ತಿದ್ದಾರೆ, ರೈಲು ಹತ್ತಿ ಕಳುಹಿಸಿಕೊಡೋಣವೆಂದು ನೋಡುತ್ತಿದ್ದಾರೆ ಹಾಗಾಗಿ ರೀಲ್ ಬಿಡುತ್ತಿದ್ದಾರೆ.

ಶ್ರೀ ಸಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇವರ ಗಾಡಿಗೆ ಚಕ್ರನೇ ಇಲ್ಲ, ಸುಮ್ಮನೆ ಹಾಗೆ ಹೋಗುತ್ತಿದೆ..

[ಗೊಂದಲ]

ಶ್ರೀ ಟಿ.ಬಿ. ಜಯಚಂದ್ರ : ವಿರೋಧ ಪಕ್ಷದಲ್ಲಿ ಕುಳಿತು ಸರ್ಕಾರ ಚೆನ್ನಾಗಿ ನಡೆಯಬೇಕೆಂದು ನಾನು ಎಷ್ಟು ಕಾಳಜಿ ವಹಿಸುತ್ತೇನೆಂದರೆ, ಶೋಭ ಕರಂದ್ಲಾಜೆ ಅವರು ಇದ್ದದ್ದು ಒಬ್ಬರೇ ಒಬ್ಬರು ಹೆಣ್ಣು ಮಗಳು, ಸಚಿವ ಸಂಪುಟದಿಂದ ಕೈಬಿಡಲಾಯಿತು,

ಬಳಿಗಾರ್ ಒಬ್ಬ ಪ್ರಾಮಾಣಿಕ ಅಧಿಕಾರಿ, ಏಕಾಏಕಿ ಬದಲಾವಣೆಯಾಯಿತು. Is it a decision of the Chief Minister?

ಶ್ರೀ ಕೆ.ಜಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಗಣಿ ವಿಚಾರ ಮಾತನಾಡುತ್ತಿದ್ದಾರೆ, ಅದು ಬಿಟ್ಟು, ಶೋಭ ಕರಂದ್ಲಾಜೆ, ನಿಮ್ಮ ವಿಚಾರ, ಜಗದೀಶ ಶೆಟ್ಟರ್ ಅವರ ವಿಚಾರವನ್ನು ಏತಕ್ಕೆ ಮಾತನಾಡಬೇಕು, ಮಾತನಾಡುವ ವಿಚಾರವನ್ನು ಮಾತನಾಡಲಿ.

ಶ್ರೀ ಟಿ.ಬಿ. ಜಯಚಂದ್ರ: ನವೆಂಬರ್ 1, 2009 ವಿಧಾನಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ಡಾ: ರಾಜ್‌ಕುಮಾರ್ ಅವರ ಅಂಚೆ ಚೀಟಿ ಬಿಡುಗಡೆ ಸಮಾರಂಭ ನಡೆಯಿತು, ಅಂದು ಮುಖ್ಯಮಂತ್ರಿಗಳು ಏನು ಹೇಳಿದರು ಎಂಬುದು ಅಧಿಕೃತ ದಾಖಲೆಯಲ್ಲಿದೆ, ರಾಜ್ಯದಲ್ಲಿ ಭಾರಿ ಪ್ರಮಾಣದ ಗಣಿಗಾರಿಕೆ ನಡೆಯುತ್ತಿದೆ, ರಾಜ್ಯದ ನೈಸರ್ಗಿಕ ಸಂಪತ್ತನ್ನು ಕೊಳ್ಳೆಹೊಡೆಯಲಾಗುತ್ತಿದೆ, ಇದನ್ನು ತಪ್ಪಿಸಲು ನನ್ನಿಂದಾಗುತ್ತಿಲ್ಲ, ನಾನು ಅಸಹಾಯಕ ಎಂದು ಹೇಳಿದ ಮುಖ್ಯಮಂತ್ರಿಗಳು ಅಧಿಕಾರದಲ್ಲಿರಬೇಕಾ? ಅದು ಬಿಡಿ ಶಿವಮೊಗ್ಗದಲ್ಲಿ ಅರಣ್ಯ ನೋಡಿ ಜ್ಞಾಪಕ ಬಂದು ಹೇಳಿದರು, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಮನ ಲೆಕ್ಕಾ ಕೃಷ್ಣನ ಲೆಕ್ಕವೆಂದು ಎರಡು ಇದೆ, ನಮಗೆ ರಾಮನ ಲೆಕ್ಕ ಸಿಗುತ್ತದೆ ಕೃಷ್ಣನ ಲೆಕ್ಕ ಬೇಕಾಗುತ್ತದೆ. ಆದರೆ ನೀವು ಕೃಷ್ಣನ ಲೆಕ್ಕ ಸೇರಿ ಸಾವಿರ ರೂಪಾಯಿ ಹಾಕುವುದಾದರೆ, ಅದು ಹೋಗಿಬಿಟ್ಟಿದೆ ಬಿಡಿ, ಕೊನೆಯಪಕ್ಷ ಅವರಿಂದ ರಿಕವರಿ ಮಾಡುವ ಕೆಲಸ ಮಾಡಿದರು ಕೂಡ, ಒಂದು ಲಕ್ಷ ಕೋಟಿ ಎಂದು ಹೇಳುತ್ತಿದ್ದರಲ್ಲ, ಆ ಒಂದು ಲಕ್ಷ ಕೋಟಿ ಮೀರುವುದಕ್ಕೆ ಸಾಧ್ಯ. ನೋಡ್ರಿ, ದುಡ್ಡು ಎಲ್ಲಿದೆ ಎಂದು ಗುಟ್ಟು ಹೇಳಿಕೊಡುತ್ತಿದ್ದೇನೆ, ಅದನ್ನು ಹಾಕಿ, ಒಂದು ಲಕ್ಷ ಕೋಟಿಯನ್ನು ತನ್ನಿ, ನಾನು ಸಹಾಯ ಮಾಡಿದರೆ ನೀವು ಅದಕ್ಕೆ ಕೂಗಾಡುತ್ತೀರಿ.

(ಗೊಂದಲ)

ಶ್ರೀ ಡಿ.ಎನ್. ದೇವರಾಜ್:- ಮಾನ್ಯ ಅಧ್ಯಕ್ಷರೆ..... ಮಾನ್ಯ ಅಧ್ಯಕ್ಷರೆ.......

(ಗೊಂದಲ)

ಅಧ್ಯಕ್ಷರು: ನೀವು ವಿಪ್ ಆಗಿ ಕಂಟ್ರೋಲ್ ಮಾಡುವುದಕ್ಕೆ ಸಹಾಯ ಮಾಡುತ್ತೀರಿ ಎಂದರೆ, ನೀವೇ ಎದ್ದು ನಿಂತು ಮಾತನಾಡಿದರೆ ಹೇಗೆ ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆ ಕೇಳಿದ್ದೆ, ತುಮಕೂರು ಜಿಲ್ಲೆಯಲ್ಲಿ Forest Conservation Act ಪ್ರಕಾರ ಫಾರೆಸ್ಟ್ area development ಮಾಡುವುದಕ್ಕೆ ಎಷ್ಟು ಜನ ಮೈನಿಂಗ್‌ನವರು ದುಡ್ಡು ಕಟ್ಟಬೇಕು ಎನ್ನುವುದಕ್ಕೆ ತುಮಕೂರು ಜಿಲ್ಲೆ ಒಂದಕ್ಕೆ ಇವರು ಕೊಟ್ಟಿರುವ ಲೀಸ್ ಅಫಾರೆಸ್ಟೇಷನ್

ಪರ್ಪಸ್‌ಗೋಸ್ಕರ due ಇರತಕ್ಕಂಥದ್ದು 89 ಕೋಟಿ. ಇಂಥದ್ದು ನೋಡಿ ನಾವು ಸುಮ್ಮನೆ ಇರಬೇಕಾ? ಅವರು ಇನ್ನೂ ಮೈನಿಂಗ್ ಮಾಡುತ್ತಿದ್ದಾರೆ. final clearance ಆಗಿಲ್ಲ. ಆದರೂ ಗಣಿಗಾರಿಕೆ ಮಾಡುತ್ತಿದ್ದಾರೆ. 89 ಕೋಟಿ ಕಟ್ಟುವುದಕ್ಕಾಗುತ್ತಿಲ್ಲ. ಇದನ್ನು ನೋಡಿಕೊಂಡು ನಮ್ಮ ಅಧಿಕಾರಿಗಳು ಕೂತಿದ್ದಾರೆ. ಇದು ಕರ್ನಾಟಕದ ಪರಿಸ್ಥಿತಿ. ರಸ್ತೆಗಳನ್ನು ಮಾಡುತ್ತೇವೆಂದು ನಿಮ್ಮ ನೀತಿಯಲ್ಲಿ ಹೇಳಿದ್ದೀರಿ, ಆ ದುಡ್ಡಿನಲ್ಲಿ ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ವಿಶೇಷವಾಗಿ ಸಿರಾದಲ್ಲಿ ರಸ್ತೆಗಳು ಹಾಳಾಗಿವೆ ಆ ರಸ್ತೆಗೆ ದುಡ್ಡು ಕೊಡುತ್ತೇವೆಂದು ಯಾವ PWD ಮಂತ್ರಿನೂ ಹೇಳಲಿಲ್ಲ ನನಗೆ. ಗೊಡ್ಡು ಹಸು ಇಟ್ಟುಕೊಂಡು ಹಾಲು ಕರೆಯುವುದಕ್ಕಾಗುತ್ತಾ, ಒಳ್ಳೆಯ ಹಸುವನ್ನು ಇಟ್ಟುಕೊಂಡು ಹಾಲು ಕರೆದರೆ ಹಾಲು ಬರುತ್ತದೆ. ಗೊಡ್ಡು ಹಸುವನ್ನು ಇಟ್ಟುಕೊಂಡು ಕರೆದರೆ ಹಾಲು ಬರುವುದಿಲ್ಲ. ಕೊಬ್ಬಿದ ಕುರಿಗಳನ್ನು ಕಡಿದರೆ ಕಟುಕನಿಗೆ ಲಾಭ. ಒಳ್ಳೆಯ ಹಾಲು ಕೊಡತಕ್ಕಂಥಹ ರಾಸುಗಳಿದ್ದರೆ ಹಾಲು ಬರುತ್ತದೆ. ನಾನು ಈಗಾಗಲೇ ಪರೋಕ್ಷವಾಗಿ ಹೇಳಿದ್ದೇನೆ. ಯಾವುದು ಕೊಬ್ಬಿದೆ, ಯಾವುದರಲ್ಲಿ ಹಾಲು ಬರುತ್ತದೆ ಎಂದು ಹೇಳಿದ್ದೇನೆ. ಅದನ್ನು ಹಿಂಡುವುದು ಬಿಟ್ಟು ನೀವು ಅಷ್ಟಕ್ಕೇ ಸೀಮಿತವಾಗಿ ಸುಮ್ಮನೆ ಕುಳಿತುಕೊಂಡರೆ ಹೇಗಾಗುತ್ತದೆ ಮಾನ್ಯ ಯಡಿಯೂರಪ್ಪನರು ಬಹುಶ: ಕೃಷ್ಣದೇವರಾಯರ ಹೆಸರು ಹೇಳಿದರು. ಕೃಷ್ಣದೇವರಾಯರು ರಾಜ್ಯಭಾರ ಮಾಡಬೇಕಾದಾಗ ಸಾಮಂತ ರಾಜರಿದ್ದರಲ್ಲಾ ಅವರು ಕಪ್ಪ ಕಾಣಿಕೆ ಕೊಡಬೇಕಾಗಿತ್ತು. ನಾವು ಇಂತಹ ಪ್ರದೇಶದಿಂದ ಬಂದಿರುವವರು ನಾವು ಕಪ್ಪ ಕಾಣಿಕೆ ಕೊಡುತ್ತೇವೆಂದು ಕೊಡುತ್ತಿದ್ದರು. ಆ ಕಪ್ಪ ಕಾಣಿಕೆ ಕೊಡತಕ್ಕಂಥಹ ದಂಧೆ ಇನ್ನೂ ನಡೆಯುತ್ತಿದೆ. ಕೃಷ್ಣದೇವರಾಯರು ಕಪ್ಪ ಕಾಣಿಕೆ ತೆಗದುಕೊಂಡು ರಾಜ್ಯಕ್ಕೆ ವಿನಿಯೋಗ ಮಾಡುತ್ತಿದ್ದರು. ಅದೇ ತರಹ ಕಪ್ಪ ಕಾಣಿಕೆ ತೆಗೆದುಕೊಳ್ಳತಕ್ಕಂಥಹ ಜನ ಇಲ್ಲಿ ಇದ್ದು, ಆ ಹಣವನ್ನು ರಾಜ್ಯಕ್ಕೆ ವಿನಿಯೋಗ ಮಾಡುತ್ತಿಲ್ಲ. ರಾಜಕಾರಣಕ್ಕೆ ವಿನಿಯೋಗ ಮಾಡುತ್ತಿದ್ದಾರೆ. ರಾಜ್ಯದ ಆಡಳಿತವನ್ನು ಹಿಡಿದಿದ್ದು ಆಯಿತು. ಈಗ ಕೇಂದ್ರದ ಅಧಿಕಾರವನ್ನು ಹಿಡಿಯುವುದಕ್ಕೆ ಹೊರಟಿರತಕ್ಕಂಥ ಒಂದು ಸಂದರ್ಭ. ಮಾನ್ಯ ಅಧ್ಯಕ್ಷರೆ, ಇನ್ನು ಬಹಳಷ್ಟು ಇದೆ. IBM ನ ಅಧಿಕಾರಿಗಳು ಬಂದಾಗ ರಕ್ಷಣೆ ಸಿಗಲಿಲ್ಲ. ಅವರನ್ನು ಹೆದರಿಸುವ ರೀತಿಯಲ್ಲಿ ಆಯಿತು. ಇದು ರಾಜ್ಯವೇ ಇಲ್ಲಿ Law and Order ಇದೆಯೇ? Supreme Court ನ ಆದೇಶದ ಮೇರೆಗೆ ಬಂದತಂಹ IBM ಅಧಿಕಾರಿಗಳನ್ನು ಹೆದರಿಸುತ್ತಾರೆ. ಒಬ್ಬ DCF ಆಗಿರುವವನು ಒಳಗೆ ಬರಬೇಡ ಎಂದು ಹೇಳುತ್ತಾನೆ. ಇನ್ನು ಮಾನ್ಯ ಸಿದ್ದರಾಮಯ್ಯನವರು ಸಂಡೂರಿಗೆ ಹೋಗುವುದಕ್ಕಾಗುತ್ತದೆಯೇ? ಈ ದಂಧೆಗಳಿಗೆಲ್ಲಾ ಕೊನೆ ಹಾಡಬೇಕಾದರೆ ಎಲ್ಲೋ ಒಂದು ಕಡೆ ನಾವು ಗಣಿಗಾರಿಕೆಯನ್ನು

ಹತ್ತಿಕ್ಕಬೇಕಾಗುತ್ತದೆ. ಇದಕ್ಕೆ ಅನೇಕ ತರಹದ ಮಾಹಿತಿಗಳು ನನ್ನಲ್ಲಿ ಇವೆ. ಮಾನ್ಯ ಅಧ್ಯಕ್ಷರೆ ನಾನು ನಿಮಗೆ ಆ ಮಾಹಿತಿ ಕೊಡುತ್ತೇನೆ. ನನ್ನ ರಾಜಕೀಯ ಜೀವನ ಪ್ರಾರಂಭವಾಗಿ ನಾನು ವಿಧಾನ ಸಭೆಗೆ ಪ್ರವೇಶ ಮಾಡಿ 33 ವರ್ಷ ಆಯಿತು, ನಾನು ಕೂಡ ನೋಡಿದ್ದೇನೆ. ಬಳ್ಳಾರಿಯಲ್ಲಿ ಒಂದು ಮನೆ ಕಟ್ಟುತ್ತಿದ್ದಾರೆ. ಅದರಲ್ಲಿ 60 ರೂಮುಗಳು ಇರತಕ್ಕಂತಹ ಮನೆ. Bomb proof shelters and helipad for his night vision shopper ಇದನ್ನು ನೋಡಿದರೆ ನಿಜವಾಗಿಯೂ ಕೃಷ್ಣದೇವರಾಯರವರು ಬದುಕಿದ್ದಾರೆಂದು ನೆನೆಸಬಹುದು. ಇವರು ಯಾರೆಂದು ನಾನು ಹೆಸರು ಹೇಳುವುದಕ್ಕೆ ಹೋದರೆ ತಪ್ಪಾಗುತ್ತದೆ. ನನ್ನ ಬಳಿ ಇರತಕ್ಕಂತಹ ಮಾಹಿತಿ ಕೊಡುತ್ತೇನೆ. ತಾವೂ ಬನ್ನಿ. ಮಾನ್ಯ ಮುಖ್ಯ ಮಂತ್ರಿಗಳಿಗೂ ಈ ಮಾಹಿತಿ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬರಲಿ, ಅವರು ಯಾರು ಎಂದು ಗೊತ್ತಾಗಬೇಕಾದರೆ ತಾವುಗಳು ಬನ್ನಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ ತಮಗೆ ಗೊತ್ತಿರುತ್ತದೆ. ಇದು ತೆಹಲ್ಕಾ ಎಂಬ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಜಯಚಂದ್ರ ರವರೇ 60 ಬೆಡ್‌ರೂಮ್ ಇರುವ ಮನೆಯ ಫೋಟೋ ತೋರಿಸಿ ನಮಗೆ ಸ್ವಲ್ಪ ಅನುಕೂಲವಾಗಲಿ.

ಶ್ರೀ ಟಿ.ಬಿ. ಜಯಚಂದ್ರ: ನೀವು ಮನಸ್ಸು ಮಾಡಿದರೆ ಆ ರೂಮಿನಲ್ಲಿ ಮಲಗುವ ಅವಕಾಶ ಮಾಡಿಕೊಡುತ್ತೀರಿ. ದಯಮಾಡಿ ಎಲ್ಲರನ್ನೂ ಒಂದು ಸಾರಿ ಕರೆದುಕೊಂಡು ಹೋಗಿ. ದೀಪ ಉರಿಯುತ್ತಿದೆ, ಅದರ ನೆರಳಿನಲ್ಲಿ ಏನಾಗುತ್ತಿದೆ ಎಂದು ನಿಮಗೆ ಗೊತ್ತಿಲ್ಲ. ಅದನ್ನೇ ಮಾನ್ಯ ಜಗದೀಶ್ ಶೆಟ್ಟರ್‌ರವರೇ ನಾನು ಹೇಳುತ್ತಿರುವುದು. ದೀಪಕ್ಕೆ ಅದರ ನೆರಳು ಗೊತ್ತಾಗುವುದಿಲ್ಲ. ಆ ನೆರಳು ಏನೆಂದು ಹೇಳುವುದಕ್ಕೆ ಹೊರಟಿದ್ದೇನೆ. ತೆಹಲ್ಕಾದಲ್ಲಿರತಕ್ಕಂಥಹ ನನ್ನ ಸ್ನೇಹಿತರು ರಾಜ್ಯದ ಮಂತ್ರಿಗಳ ವಿಚಾರ ಇರಬೇಕಾದಾಗ ನಾನು ಒಂದೇ ಒಂದು ಮಾತನ್ನು ಕೇಳುತ್ತೇನೆ. ನಿಮಗೆ ಧೈರ್ಯ ಇದ್ದರೆ ಇವೆಲ್ಲದಕ್ಕೂ ಕಡಿವಾಣ ಹಾಕಬೇಕಾದಾಗ ರಾಜ್ಯದ ಹಿತದೃಷ್ಟಿಯಿಂದ ಪ್ರಕೃತಿಯ ಸಂಪತ್ತಿನ ಉಳಿವಿಗೋಸ್ಕರ ಈಗಾಗಲೇ ಆಗಿರತಕ್ಕಂಥಹ ಅವ್ಯವಹಾರ ಲೋಕಾಯುಕ್ತರು ರಾಜೀನಾಮೆ ವಾಪಸ್ ತೆಗೆದುಕೊಂಡ ತಕ್ಷಣ ಏನೂ ಆಗಲಿಲ್ಲ. ಅವರು ಕೊಟ್ಟ ವರದಿ ನಮ್ಮ ಮುಂದಿದೆ. ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಿ ಚೆಂಡು ನಿಮ್ಮ ಅಂಗಳದಲ್ಲಿದೆ. ದಯಮಾಡಿ ಅವರು ಯಾರೇ ಆಗಲಿ, ನಮ್ಮ ಕಡೆಯವರಾಗಲಿ, ನಿಮ್ಮ ಕಡೆಯವರಾಗಲಿ, ಯಾರಾದರೂ ಆಗಲಿ, investigation ಮಾಡಿ ಅವರನ್ನು ಒದ್ದು ಒಳಗೆ ಹಾಕುತ್ತೀರಿ ಎಂದರೆ ನಮ್ಮದೇನೂ ಅಭ್ಯಂತರವಿಲ್ಲ. ನಮಗೆ ಇರುವುದು ಐದು ವರ್ಷ ಅವಕಾಶ. ಎರಡು ವರ್ಷ ಮುಗಿಯಿತು, ಇನ್ನು ಎಷ್ಟು ವರ್ಷ ನಾವು ಇಲ್ಲಿ ಕೂತಿರುತ್ತೇವೆ? ಲೋಕಾಯುಕ್ತ ಸಂಸ್ಥೆಯವರು

ಹೇಳಿದರು ಏನೂ action ಆಗಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಅವರ ಜವಾಬ್ದಾರಿಯನ್ನು ಮರೆತಿದ್ದಾರೆ. ಅಧಿಕಾರದಲ್ಲಿ ಉಳಿಯುವಂತಹ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ, ಜನಗಳ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ, ದಯಮಾಡಿ ರಾಜೀನಾಮೆ ಕೊಟ್ಟು ಹೋಗುವುದು ಸೂಕ್ತ ಎನ್ನುವಂತಹ ಮಾತನ್ನು ಹೇಳಿ, ಕೊನೆಯದಾಗಿ ಈ ಎಲ್ಲಾ ಅವ್ಯವಹಾರಗಳನ್ನು ಕೊನೆಗಾಣಿಸಬೇಕಾದರೆ ನೀವು CBI ಗೆ ಕೊಡುವುದಕ್ಕೆ ಕೇಂದ್ರ ಸರ್ಕಾರ ಇವತ್ತು ಮುಂದೆ ಬಂದಿದೆ. ಮುಂದೆ ಬರುವುದಕ್ಕೆ ತಯಾರಿದೆ, ಸಹಕಾರ ಕೊಡುತ್ತದೆ, ನಮ್ಮ ರಾಜ್ಯದ ಹಿತದೃಷ್ಟಿಯಿಂದ CBI enquiry ಮಾಡಿ, ಅಕ್ರಮ ಗಣಿಗಾರಿಕೆಯಿಂದ ಇವತ್ತು ಪ್ರಜಾಪ್ರಭುತ್ವದ ಮೂಲ ಬೇರುಗಳನ್ನು ಅಲ್ಲಾಡಿಸತಕ್ಕಂತಹ ರೀತಿಯಲ್ಲಿ ಹಣ ಪ್ರಭಾವ ಏನು ನಡೆಯುತ್ತಿದೆ, ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣಕ್ಕೋಸ್ಕರ ಇವತ್ತು ಈ ಕುರ್ಚಿಯಲ್ಲಿ ಕುಳಿತುಕೊಳ್ಳುವ ನೈತಿಕ ಅಧಿಕಾರ ನಿಮಗೆ ಇಲ್ಲವೆನ್ನತಕ್ಕಂತಹ ಮಾತನ್ನು ಹೇಳಿ, CBI enquiry ಮಾಡಿ, ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣರವರು 3.00 ಗಂಟೆಗೆ ಮಾತನಾಡುತ್ತೀರೋ ಅಥವಾ ಈಗಲೇ ಮಾತನಾಡುತ್ತೀರೋ 3.00 ಗಂಟೆಗೆ ಮಾತನಾಡಿ. ಈಗ ಸದನವನ್ನು 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಪುನ: 3.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು)

(ಮತ್ತೆ ಸಭೆಯು ಮಧ್ಯಾಹ್ನ 3.20 ಗಂಟೆಗೆ ಪ್ರಾರಂಭಗೊಂಡಿತು
ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ರಾಜ್ಯಪಾಲರಿಂದ ಬಂದಿರುವ ಸಂದೇಶ:

ವಿಷಯ: ನ್ಯಾ .ಎನ್. ಸಂತೋಷ ಹೆಗಡೆಯವರು ನೀಡಿರುವ ರಾಜೀನಾಮೆ ವಾಪಸ್ ಪಡೆದಿರುವ ಬಗ್ಗೆ.

ಅಧ್ಯಕ್ಷರು: ಘನತೆವೆತ್ತ ರಾಜ್ಯಪಾಲರಿಂದ ಸಂದೇಶ ಬಂದಿದೆ.

Message of H.E. the Governor of Karnataka Sri H.R. Bharadwaj to both the Houses of Karnataka Legislature under Article 175 of the Constitution of India.